**ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-560001.**

ಸಂಖ್ಯೆ: ಪಿಎಸ್‌ಸಿ 521ಇಪ /2025-26/ 657 ದಿನಾಂಕ: 18-02-2026

**ಅಧಿಸೂಚನೆ**

1) **2026ರ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಗಳಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ:-**

| | |
|---|---|
| ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ: | 21-02-2026 |
| ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: | 21-03-2026 |
| ಶುಲ್ಕ ಪಾವತಿಸಲು ಕೊನೆಯ ದಿನಾಂಕ: | 23-03-2026 |

2) **ಅರ್ಜಿ ಸಲ್ಲಿಸುವ ವಿಧಾನ:-**

ಇಲಾಖಾ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕರ್ನಾಟಕ ಲೋಕಸೇವಾ ಆಯೋಗದ (KPSC) ವೆಬ್‌ಸೈಟ್ http://www.kpsc.kar.nic.in ಗೆ ಭೇಟಿ ನೀಡಿ ಅರ್ಜಿ ಸಲ್ಲಿಸುವ ವಿಧಾನಕ್ಕಾಗಿ **ಅನುಬಂಧ-1** ರಲ್ಲಿ ನಮೂದಿಸಿರುವ ಮಾಹಿತಿಯನ್ನು ಗಮನಿಸತಕ್ಕದ್ದು.

3) **ಅರ್ಹತೆ:-**

a) ಈ ಕೆಳಕಂಡ ನೌಕರರು ಇಲಾಖಾ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಅ) ಸರ್ಕಾರಿ ನೌಕರರು.

ಆ) ಸರ್ಕಾರಿ ಸ್ವಾಮ್ಯಕ್ಕೊಳಪಟ್ಟ ನಿಗಮ/ ಮಂಡಳಿ/ ಸ್ಥಳೀಯ ಸಂಸ್ಥೆಗಳು/ ವಿಶ್ವವಿದ್ಯಾಲಯಗಳು / ಪ್ರಾಧಿಕಾರಿಗಳ ಖಾಯಂ ನೌಕರರು.

b) ಗ್ರೂಪ್-'ಡಿ' ನೌಕರರು ಇಲಾಖಾ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

## 4) ಅಭ್ಯರ್ಥಿಗಳಿಗೆ ವಿಶೇಷ ಸೂಚನೆಗಳು:

ಅ) ಇಲಾಖಾ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಸಂಬಂಧ ಅಭ್ಯರ್ಥಿಗಳು **ಅನುಬಂಧ-2** ರಲ್ಲಿನ ಸೂಚನೆಗಳನ್ನು ಓದಿಕೊಳ್ಳತಕ್ಕದ್ದು.

ಆ) ಸಬಾರ್ಡಿನೇಟ್ ಅಕೌಂಟ್ಸ್ ಸರ್ವೀಸಸ್ (ಎಸ್.ಎ.ಎಸ್.) ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವ ಅಭ್ಯರ್ಥಿಗಳು **ಅನುಬಂಧ-3** ರಲ್ಲಿನ ವಿಶೇಷವಾದ ಸೂಚನೆಗಳನ್ನು ಗಮನಿಸತಕ್ಕದ್ದು.

ಇ) ಇಲಾಖಾ ಪರೀಕ್ಷೆಗಳನ್ನು ಆಫ್ ಲೈನ್ ಓಎಂಆರ್ ಮಾದರಿ (Offline/type) / ಆನ್ ಲೈನ್ ಮಾದರಿಯ (Computer Based Test) ಮೂಲಕ ನಡೆಸಲಾಗುವುದು ಈ ವಿಷಯದಲ್ಲಿ ಆಯೋಗದ ತೀರ್ಮಾನವೇ ಅಂತಿಮವಾಗಿರುತ್ತದೆ.

ಈ) ಆನ್ ಲೈನ್ ಅರ್ಜಿ ಸಲ್ಲಿಸುವಾಗ ಸ್ಪಷ್ಟವಾದ ಇತ್ತೀಚಿನ ಭಾವಚಿತ್ರ ಮತ್ತು ಸಹಿಯನ್ನು ಅಪ್ ಲೋಡ್ ಮಾಡತಕ್ಕದ್ದು ಇಲ್ಲವಾದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಉ) ಸಕ್ರಿಯವಾಗಿರುವ ಇ-ಮೇಲ್ ಐಡಿ ಮತ್ತು ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ಅರ್ಜಿಯಲ್ಲಿ ನಮೂದಿಸತಕ್ಕದ್ದು ಹಾಗೂ ಪರೀಕ್ಷಾ ಪ್ರಕ್ರಿಯೆ ಮುಕ್ತಾಯಗೊಳ್ಳುವವರೆಗೂ ಇರತಕ್ಕದ್ದು.

## 5) ವಿಷಯ ಸಂಕೇತಗಳು ಮತ್ತು ಪ್ರತಿ ವಿಷಯಕ್ಕೆ ನಿಗದಿಪಡಿಸಿದ ಶುಲ್ಕದ ವಿವರಗಳು:-

ಇಲಾಖಾ ಪರೀಕ್ಷೆಯ ವಿವಿಧ ವಿಷಯಗಳ ಹೆಸರುಗಳು, ಅವುಗಳ ಸಂಕೇತಗಳು ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 6 ಸೆಲೋಸೇ 2010, ದಿನಾಂಕ: 06-08-2010 ರನ್ವಯ ನಿಗದಿಪಡಿಸಿರುವ ಶುಲ್ಕಗಳ ವಿವರಗಳನ್ನು **ಅನುಬಂಧ-4** ರಲ್ಲಿ ನಮೂದಿಸಿದೆ.

## 6) ಪರೀಕ್ಷಾ ಕೇಂದ್ರಗಳು ಮತ್ತು ವೇಳಾಪಟ್ಟಿ:-

ಇಲಾಖಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಒಟ್ಟು 03 ಹಂತಗಳಲ್ಲಿ ಪರೀಕ್ಷೆಗಳನ್ನು ನಡೆಸಲಾಗುತ್ತಿದ್ದು, ಪ್ರಥಮ ಹಂತದಲ್ಲಿ ಬೆಂಗಳೂರು ಸೇರಿದಂತೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಡೆಸಲಾಗುವುದು. ದ್ವಿತೀಯ ಹಂತದಲ್ಲಿ ವಿಭಾಗೀಯ ಕೇಂದ್ರಗಳಾದ ಬೆಂಗಳೂರು, ಬೆಳಗಾವಿ, ಮೈಸೂರು, ಕಲಬುರಗಿ ಮತ್ತು ಶಿವಮೊಗ್ಗ ಜಿಲ್ಲಾ ಕೇಂದ್ರಗಳಲ್ಲಿ ನಡೆಸಲಾಗುವುದು ಹಾಗೂ ತೃತೀಯ ಹಂತದಲ್ಲಿ ಬೆಂಗಳೂರು ಪರೀಕ್ಷಾ ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುವುದು. ಆದಾಗ್ಯೂ ಪರೀಕ್ಷಾ ಕೇಂದ್ರಗಳ ನಿಗದಿಪಡಿಸುವಿಕೆಯು ಆಯೋಗದ ತೀರ್ಮಾನಗೊಳಪಟ್ಟಿರುತ್ತದೆ. ಸದರಿ ಮಾಹಿತಿಯನ್ನು **ಅನುಬಂಧ-5** ರಲ್ಲಿ ತಿಳಿಸಲಾಗಿರುತ್ತದೆ.

7) **ಪಠ್ಯ ಕ್ರಮಗಳು:-**

ಇಲಾಖಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ವಿವಿಧ ವಿಷಯಗಳ ವಸ್ತುನಿಷ್ಠ ಬಹು ಆಯ್ಕೆ ಮಾದರಿಯ ಒಟ್ಟು 99 ಪತ್ರಿಕೆಗಳಿಗೆ ಹಾಗೂ ವಿವರಣಾತ್ಮಕ ಮಾದರಿಯ ಒಟ್ಟು 19 ಪತ್ರಿಕೆಗಳಿಗೆ ಪರೀಕ್ಷೆ ನಡೆಸಲಾಗುತ್ತಿದ್ದು, ಸಂಬಂಧಿಸಿದ ಮಾಹಿತಿಯನ್ನು **ಅನುಬಂಧ-6** ರಲ್ಲಿ ನಮೂದಿಸಲಾಗಿದೆ.

8) **ವಿನಾಯಿತಿ:-**

ನಿಯಮಾನುಸಾರ ಹಿಂದಿನ ಎರಡು ವರ್ಷಗಳ ಅವಧಿಯಲ್ಲಿ ಇಲಾಖಾ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ಗಳಿಸಿರುವ ಅಂಕಗಳ ಆಧಾರದ ಮೇರೆಗೆ ಹಾಗೂ ಅಭ್ಯರ್ಥಿಗಳು ಹೊಂದಿರುವ ಶೈಕ್ಷಣಿಕ ವಿದ್ಯಾರ್ಹತೆ ಮೇರೆಗೆ ಕೆಲವು ವಿಷಯಗಳಿಗೆ/ಪತ್ರಿಕೆಗಳಿಗೆ ವಿನಾಯಿತಿಯನ್ನು ನೀಡಲು ಅವಕಾಶವಿದೆ. ಸದರಿ ವಿವರಗಳನ್ನು **ಅನುಬಂಧ-7** ರಲ್ಲಿ ತಿಳಿಸಲಾಗಿದೆ.

9) **ಅಂಧ/ಅಂಗವಿಕಲ ಅಭ್ಯರ್ಥಿಗಳ ಕುರಿತು:-**

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 272 ಸೇನಿನಿ 2013, ದಿನಾಂಕ: 11.02.2021 ಮತ್ತು ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 12 ಸೇನೆನಿ 2023 ಬೆಂಗಳೂರು, ದಿನಾಂಕ:23.01.2023 ರಂತೆ ಅಂಗವಿಕಲ ನಿಯಮಗಳನ್ವಯ ಪರೀಕ್ಷೆ ಬರೆಯಲು ದೈಹಿಕ ಅಸಮರ್ಥತೆ ಹೊಂದಿರುವ ಅಭ್ಯರ್ಥಿಗಳಿಗೆ ಆಯೋಗವು ಇಲಾಖಾ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿದೆ. ಅಂಧ/ದೈಹಿಕ ಅಸಮರ್ಥತೆಯುಳ್ಳ ಅಭ್ಯರ್ಥಿಗಳು ಲಿಪಿಕಾರರ ಸಹಾಯದೊಂದಿಗೆ ಪರೀಕ್ಷೆಗೆ ಹಾಜರಾಗುವ ಕುರಿತಾದ ಮಾಹಿತಿಯನ್ನು **ಅನುಬಂಧ-8** ರಲ್ಲಿ ಓದಿಕೊಳ್ಳತಕ್ಕದ್ದು.

10) **ಕನ್ನಡ ಭಾಷಾ ಪರೀಕ್ಷೆ ಕುರಿತು:-**

ಅಖಿಲ ಭಾರತ ಸೇವೆಗಳ (ಐ.ಎ.ಎಸ್., ಐ.ಪಿ.ಎಸ್. ಮತ್ತು ಐ.ಎಫ್.ಎಸ್.) ಅಭ್ಯರ್ಥಿಗಳು ಕಡ್ಡಾಯವಾಗಿ ವಿಷಯ ಸಂಕೇತ-72 ಅನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು, ಇತರೆ ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ವಿಷಯ ಸಂಕೇತ-47 ನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು. ಮಾಹಿತಿಯನ್ನು **ಅನುಬಂಧ-9** ರಲ್ಲಿ ನೀಡಲಾಗಿದೆ.

11) **ನೂತನ / ಇತ್ತೀಚಿನ ತಿದ್ದುಪಡಿಗಳು:-**

ಇಲಾಖಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಕೆಲವು ಇಲಾಖೆಗಳ ಪಠ್ಯಕ್ರಮಗಳು ಪರಿಷ್ಕೃತ/ ತಿದ್ದುಪಡಿಗೊಂಡಿದ್ದು, ಮಾಹಿತಿಯನ್ನು **ಅನುಬಂಧ-10** ರಲ್ಲಿ ನೀಡಲಾಗಿದೆ.

## 12) ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳುವ ವಿಧಾನ:-

ಅಭ್ಯರ್ಥಿಗಳು ಇಲಾಖಾ ಪರೀಕ್ಷೆಯ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ವಿಧಾನವನ್ನು **ಅನುಬಂಧ-11** ರಲ್ಲಿ ತಿಳಿಸಲಾಗಿದೆ.

## 13) ಪ್ರಮಾಣಪತ್ರಗಳ ನೈಜತೆಯ ಬಗ್ಗೆ:-

ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡ ಅಭ್ಯರ್ಥಿಗಳು ಮೂಲ ಪ್ರಮಾಣಪತ್ರಗಳನ್ನು ಪಡೆಯುವ ಬಗ್ಗೆ ಹಾಗೂ ಅವುಗಳ ನೈಜತೆಯ ಕುರಿತಂತೆ **ಅನುಬಂಧ-12** ರಲ್ಲಿ ತಿಳಿಸಲಾಗಿರುತ್ತದೆ.

## 14) ಅಂಕಗಳ ಮರುಎಣಿಕೆ ಕುರಿತು:-

ಇಲಾಖಾ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡ ನಂತರ ಮರು ಮೌಲ್ಯಮಾಪನಕ್ಕೆ ಅವಕಾಶವಿರುವುದಿಲ್ಲ. ಆದರೆ 19 ವಿವರಣಾತ್ಮಕ ಮಾದರಿಯ ಉತ್ತರ ಪತ್ರಿಕೆಗಳಿಗೆ ಸಂಬಂಧಿಸಿದಂತೆ ಅಂಕಗಳ ಮರು ಎಣಿಕೆಗೆ ಅವಕಾಶ ನೀಡಲಾಗಿದೆ ವಿವರಗಳನ್ನು **ಅನುಬಂಧ-13** ರಲ್ಲಿ ತಿಳಿಸಲಾಗಿದೆ.

## 16) ಸಹಾಯ ವಾಣಿ:-

ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಸಂಪರ್ಕಿಸಬಹುದಾಗಿರುವ ದೂರವಾಣಿ ಸಂಖ್ಯೆಗಳು:

| | |
|---|---|
| ಸೇವಾ ಸಿಂಧು ಪೋರ್ಟಲ್ ಸಹಾಯವಾಣಿ ಸಂಖ್ಯೆ:<br>(ಅರ್ಜಿ ಸಲ್ಲಿಸುವ ಸಂದರ್ಭಗಳಲ್ಲಿ ಉಂಟಾಗಬಹುದಾದ ತಾಂತ್ರಿಕ ಸಮಸ್ಯೆಗಳಿಗೆ ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ) | 080-22279954<br>8792662814<br>8792662816 |

ಆಯೋಗದ ದೂರವಾಣಿ ಸಂಖ್ಯೆಗಳು:

| | |
|---|---|
| ಉಪ ಕಾರ್ಯದರ್ಶಿ, ಇಲಾಖಾ ಪರೀಕ್ಷೆಗಳು | 080-30574918 |
| ಶಾಖಾಧಿಕಾರಿ, ಇಲಾಖಾ ಪರೀಕ್ಷಾ ಶಾಖೆ | 080-30574929 |

**ದುರ್ವರ್ತನೆ:-** ಒಬ್ಬ ಅಭ್ಯರ್ಥಿಯು ನಕಲು ವ್ಯಕ್ತಿಯಾಗಿರುವನೆಂದು ಅಥವಾ ಯಾವುದೇ ಒಬ್ಬ ಅಭ್ಯರ್ಥಿಯು ಸೇವಾ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಕೃತ್ರಿಮ/ಖೋಟಾ ದಸ್ತಾವೇಜನ್ನು ಅಥವಾ ಅಕ್ರಮವಾಗಿ ತಿದ್ದಿದ ದಸ್ತಾವೇಜುಗಳನ್ನು ಸಲ್ಲಿಸಿದ ಅಥವಾ ಸರಿಯಲ್ಲದ ಅಥವಾ ತಪ್ಪು ಅಥವಾ ಸುಳ್ಳು ವಿವರಣೆಯನ್ನು ನೀಡಿದ ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿದ ಅಥವಾ ಪರೀಕ್ಷೆಯಲ್ಲಿ ಅಕ್ರಮ ವಿಧಾನವನ್ನು ಅನುಸರಿಸಲು ಪ್ರಯತ್ನಿಸಿದ ಅಥವಾ ಬೇರೆ ರೀತಿಯಲ್ಲಿ ಇತರೆ ಯಾವುದೇ ಅಕ್ರಮ/ಅನುಚಿತ ಮಾರ್ಗವನ್ನು ಅನುಸರಿಸಿದ ಅಪರಾಧವನ್ನು ಮಾಡಿರುವುದಾಗಿ ಆಯೋಗಕ್ಕೆ ಕಂಡುಬಂದಲ್ಲಿ, ಅಂತಹ ಅಭ್ಯರ್ಥಿಯನ್ನು

ಕ್ರಿಮಿನಲ್ ವ್ಯವಹರಣೆಗೆ ಗುರಿಪಡಿಸುವುದಲ್ಲದೆ, ಆಯೋಗದ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ:ಆಡಳಿತ/398/1993-94/ಪಿಎಸ್‌ಸಿ, ದಿನಾಂಕ:14-07-1993ರ ಮತ್ತು ಅಧಿಕೃತ ಜ್ಞಾಪನ ಸಂಖ್ಯೆ: ಪಿಎಸ್‌ಸಿ273 ಗೋಪ್ಯ(2)/2020-21 ದಿನಾಂಕ:27-11-2020 ರ ಮೇರೆಗೆ ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದು.

**ವಿಶೇಷ ಸೂಚನೆ:-** ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದಲ್ಲಿ ಮೇಲ್ವಿಚಾರಕರು / ಸಂವೀಕ್ಷಕರು ನೀಡುವ ಸೂಚನೆಗಳನ್ನು ತಪ್ಪದೇ ಪಾಲಿಸುವುದು. ತಪ್ಪಿದಲ್ಲಿ ಅದನ್ನು ದುರ್ವರ್ತನೆಯನ್ನಾಗಿ (Mal-Practice) ಪರಿಗಣಿಸಲಾಗುವುದು ಮತ್ತು ಈ ಬಗ್ಗೆ ಶಿಸ್ತಿನ ಕಾರ್ಯವಿಧಾನಗಳಿಗೆ ಒಳಪಡಿಸಲಾಗುವುದು.

ಸಹಿ/-

ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.

*****

## ಅನುಬಂಧ-1

### 1. ಇಲಾಖಾ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವಿಧಾನ:-

ಇಲಾಖಾ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಲು ಕರ್ನಾಟಕ ಲೋಕಸೇವಾ ಆಯೋಗದ (KPSC) ವೆಬ್‌ಸೈಟ್ http://www.kpsc.kar.nic.in ನ Home Page ನಲ್ಲಿರುವ Apply Online- for various Notification ಬಟನ್ ಮೇಲೆ ಕ್ಲಿಕ್ ಮಾಡಿ **ಅಥವಾ** what is new ರಡಿಯಲ್ಲಿ scroll ಆಗುವ Departmental Examination- 2026-I session ಮೇಲೆ ಕ್ಲಿಕ್ ಮಾಡಬೇಕು. ನಂತರ Click here to apply Online Application for Departmental Examination-2026-I session ಮೇಲೆ ಕ್ಲಿಕ್ ಮಾಡಿದ ನಂತರ ಸೇವಾ ಸಿಂಧುವಿನ ಪೋರ್ಟಲ್ ಅಡಿ ಇಲಾಖಾ ಪರೀಕ್ಷೆಯ ಅರ್ಜಿ ಸಲ್ಲಿಸುವ ನಮೂನೆ ಮೂಡುತ್ತದೆ. ಈ ಅರ್ಜಿ ನಮೂನೆಯಲ್ಲಿ ಈ ಕೆಳಕಂಡ ವಿಧಾನಗಳನ್ನು ಅನುಸರಿಸಿ ಅವಶ್ಯ ವಿವರಗಳನ್ನು ಭರ್ತಿ ಮಾಡಿ ಅರ್ಜಿಯನ್ನು ಸಲ್ಲಿಸುವಂತೆ ಸೂಚಿಸಿದೆ. ಅರ್ಜಿ ಸಲ್ಲಿಸುವ ಸಮಯದಲ್ಲಿಯೇ ನಿಗದಿತ ದಾಖಲೆಗಳನ್ನು ಸ್ಪಷ್ಟವಾಗಿ ಕಾಣುವಂತೆ ಕಡ್ಡಾಯವಾಗಿ ಅಪ್‌ಲೋಡ್ ಮಾಡಿ ಆನ್‌ಲೈನ್ ಮೂಲಕವೇ ಶುಲ್ಕವನ್ನು ಪಾವತಿಸಬೇಕು. ಅಂಚೆ ಮೂಲಕ/ ಖುದ್ದಾಗಿ/ ಇ-ಮೇಲ್ ಮೂಲಕ ಇತ್ಯಾದಿ ಯಾವುದೇ ರೂಪದಲ್ಲಿ ಸಲ್ಲಿಸುವ ಅರ್ಜಿ/ ಮನವಿ/ ದಾಖಲೆಗಳು/ ಶುಲ್ಕವನ್ನು ಅಭ್ಯರ್ಥಿಗೆ ಯಾವುದೇ ಮುನ್ಸೂಚನೆ ನೀಡದೆ ತಿರಸ್ಕರಿಸಲಾಗುವುದು.

1. ಅರ್ಜಿದಾರರು ಸೇವಾ ಸಿಂಧುವಿನಲ್ಲಿ ಖಾತೆ ಹೊಂದಿದ್ದಲ್ಲಿ ಅಂತಹವರು ತಮ್ಮ username & password ಅಥವಾ ಮೊಬೈಲ್ ಸಂಖ್ಯೆ ಓ.ಟಿ.ಪಿ. ಬಳಸಿ ಪೋರ್ಟಲ್ ನಲ್ಲಿ ಲಾಗಿನ್ ಆಗಬೇಕು.
   If the candidate has an existing account in Seva Sindhu, he/she shall login with his/her username & password or Mobile number & OTP on the portal.

2. ಸೇವಾ ಸಿಂಧುವಿನಲ್ಲಿ ಖಾತೆ ಹೊಂದಿಲ್ಲವಾದಲ್ಲಿ ಅಭ್ಯರ್ಥಿಯು New User? Register here ಮೇಲೆ ಕ್ಲಿಕ್ ಮಾಡಬೇಕು ನಂತರ Digilocker ಪುಟ ತೆರೆದುಕೊಳ್ಳುತ್ತದೆ.
   If the candidate does not have an account in Seva Sindhu, he/she must click on``New User?Register here” after which Digilocker page will open.

3. ಅಭ್ಯರ್ಥಿಯು ತನ್ನ ಆಧಾರ್ ಸಂಖ್ಯೆ ನಮೂದಿಸಿ Continue ಬಟನ್ ಒತ್ತಿ ಮೊಬೈಲ್ ನಲ್ಲಿ ಬಂದಿರುವ ಓ.ಟಿ.ಪಿ. ನಂಬರನ್ನು ನಮೂದಿಸಿ Continue ಬಟನ್ ಒತ್ತಬೇಕು ನಂತರ Allow ಮೇಲೆ ಕ್ಲಿಕ್ ಮಾಡಿ ಮುಂದುವರೆಯಬಹುದು.

Candidate must enter his/her Aadhaar Number and press on "continue button". He/She must enter the OTP received to his/her mobile number and shall press on "Continue" and click on "Allow" to proceed further.

4. ಅಭ್ಯರ್ಥಿಯು ಸೇವಾ ಸಿಂಧು ಖಾತೆಯನ್ನು ಹೊಂದಲು ನಿಖರವಾದ ಇ-ಮೇಲ್ ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನು ನಮೂದಿಸಿ ಖಾತೆ ತೆರೆಯಬೇಕು. ನಂತರ password ನಮೂದಿಸಿ ಮತ್ತು ಇ-ಮೇಲ್, ಮೊಬೈಲ್ ದೂರವಾಣಿಯಲ್ಲಿ ಸ್ವೀಕೃತಗೊಂಡ ಓ.ಟಿ.ಪಿ. ಸಂಖ್ಯೆಯನ್ನು ನಮೂದಿಸುವ ಮೂಲಕ ಸೇವಾ ಸಿಂಧುವಿನಲ್ಲಿ ಅಭ್ಯರ್ಥಿಯು ನೋಂದಣಿಯನ್ನು ಮಾಡಿಕೊಳ್ಳಬಹುದು.

   Candidate shall create his/her Seva Sindhu account by entering valid Email Address and Mobile number. By creating password and entering the OTP received on Email and Mobile Number, Candidate shall successfully register in Seva Sindhu.

5. ಒಮ್ಮೆ ಲಾಗಿನ್ ಆದ ನಂತರ ಅಭ್ಯರ್ಥಿಯು Home Page ಮೇಲಿರುವ "Apply for KPSC Departmental Exam" ಲಿಂಕ್ ಮೇಲೆ ಕ್ಲಿಕ್ ಮಾಡಬೇಕು. ಕ್ಲಿಕ್ ಮಾಡಿದ್ದಲ್ಲಿ ಆನ್ ಲೈನ್ ಅರ್ಜಿಯ ಮುಖಪುಟ ತೆರೆದುಕೊಳ್ಳುತ್ತದೆ.

   "After logging in, candidate shall click on the link "Apply for KPSC Departmental Exam" on the Home Page then online Application will be opened.

6. ಅಭ್ಯರ್ಥಿಗಳು ಅಧಿಸೂಚನೆಯಲ್ಲಿನ ಅವಶ್ಯ ಸೂಚನೆಗಳನ್ನು ಓದಿಕೊಂಡು ನಂತರ ಅರ್ಜಿ ನಮೂನೆ ಭರ್ತಿ ಮಾಡಬೇಕು. ನಂತರ Submit ಬಟನ್ ಒತ್ತಿದಾಗ ಭರ್ತಿ ಮಾಡಿದ ಅರ್ಜಿಯ ಪ್ರಿವ್ಯೂ (ಪ್ರತಿ) ಲಭ್ಯವಾಗುತ್ತದೆ.

   Candidate shall read all the necessary instruction and fill the application form. After pressing "submit" a preview of the application form filled is Available

7. Attach Annexure ಮೇಲೆ ಕ್ಲಿಕ್ ಮಾಡಿ ಅಭ್ಯರ್ಥಿಯು ಅವಶ್ಯ ದಾಖಲೆಗಳನ್ನು ಕಡ್ಡಾಯವಾಗಿ ಅಪ್ಲೋಡ್ ಮಾಡಬೇಕು.

"The candidate shall attach necessary documents by clicking on "Attach Annexure".

8. ಒಮ್ಮೆ ದಾಖಲೆಗಳನ್ನು ಅಪ್ಲೋಡ್ ಮಾಡಿದ ನಂತರ 'Save Annexure' ಮೇಲೆ ಕ್ಲಿಕ್ ಮಾಡಬೇಕು. ಅರ್ಜಿಯ ಪ್ರಿವ್ಯೂನೊಂದಿಗೆ ದಾಖಲೆಗಳು ಲಭ್ಯವಾಗುತ್ತವೆ.

   Once documents are uploaded, candidate shall click on "Save Annexures". A preview of the application form along with annexures is available.

9. ನಂತರ ಅಭ್ಯರ್ಥಿಯು 'e-sign' ಮೇಲೆ ಮತ್ತು Make payment ಮೇಲೆ ಕ್ಲಿಕ್ ಮಾಡಿ ಶುಲ್ಕವನ್ನು ಸಂದಾಯ ಮಾಡಬೇಕು ನಂತರ I agree with above user consent and e-sign terms and conditions ಮೇಲೆ ಕ್ಲಿಕ್ ಮಾಡಬೇಕು.

   Candidate then shall click on "esign and Make payment" and click on "I agree with above user consent and esign terms and conditions".

10. ಅಭ್ಯರ್ಥಿಯು ಆಧಾರ್ ಸಂಖ್ಯೆಯನ್ನು ನಮೂದಿಸಿದ ಕೂಡಲೇ ಅವರ ನೋಂದಾಯಿತ ಮೊಬೈಲ್ ಸಂಖ್ಯೆಗೆ ಬರುವ ಓಟಿಪಿ ಸಂಖ್ಯೆ ಮೂಲಕ ಇದನ್ನು ಅಂಗೀಕರಿಸಲಾಗುವುದು.

    As soon as the candidates enters the aadhaar number, it will be verified through an OTP number sent to their registered mobile number.

11. ಅಭ್ಯರ್ಥಿಯು Make Payment ಮೇಲೆ ಕ್ಲಿಕ್ ಮಾಡಿ ಆನ್ ಲೈನ್ ಮೂಲಕ ಶುಲ್ಕವನ್ನು ಪಾವತಿಸಬೇಕು.

    Candidate shall make online payment by clicking on "Make Payment".

12. ಒಮ್ಮೆ ಅರ್ಜಿಯನ್ನು submit ಮಾಡಿದ ನಂತರ ಸ್ವೀಕೃತಿ ನಮೂನೆಯು ಜನರೇಟ್ ಆಗುತ್ತದೆ. ಈ ಅರ್ಜಿಯ ಸಂಖ್ಯೆಯನ್ನು ಮುಂದಿನ ಪತ್ರ ವ್ಯವಹಾರಕ್ಕೆ ಉಪಯೋಗಿಸಬೇಕು. Application Preview ನ್ನು ಕಡ್ಡಾಯವಾಗಿ Download ಮಾಡಿಕೊಳ್ಳತಕ್ಕದ್ದು.

    An acknowledgment Form is generated once application is submitted. The Application No. shall be used for future correspondence.

*****

## ಅನುಬಂಧ-2

**ಇಲಾಖಾ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಸೂಚನೆಗಳು :-**

ಅ) ರಾಜ್ಯ ಸರ್ಕಾರಿ ನೌಕರರು ಮತ್ತು ರಾಜ್ಯ ಸರ್ಕಾರದ ಸ್ವಾಮ್ಯಕ್ಕೊಳಪಟ್ಟ ನಿಗಮ/ ಮಂಡಳಿ/ ಸ್ಥಳೀಯ ಸಂಸ್ಥೆಗಳು/ ವಿಶ್ವವಿದ್ಯಾಲಯಗಳು/ ಪ್ರಾಧಿಕಾರಗಳ ಖಾಯಂ ನೌಕರರು **ಮಾತ್ರ** ಅರ್ಜಿ ಸಲ್ಲಿಸಲು ಅರ್ಹತೆ ಹೊಂದಿರುತ್ತಾರೆ.

ಆ) **ಆನ್ ಲೈನ್ ಅರ್ಜಿಯಲ್ಲಿ ಭರ್ತಿ ಮಾಡಿರುವ ವಿವರಗಳಂತೆಯೇ ಪ್ರವೇಶ ಪತ್ರದಲ್ಲಿ ಮತ್ತು ಉತ್ತೀರ್ಣತಾ ಪ್ರಮಾಣ ಪತ್ರಗಳಲ್ಲಿ ವಿವರಗಳು ಮುದ್ರಿತವಾಗುವ ಕಾರಣ ಅರ್ಜಿ ಭರ್ತಿ ಮಾಡುವ ಸಂದರ್ಭದಲ್ಲಿ ಅಭ್ಯರ್ಥಿಗಳು ಹೆಸರು/ಹುದ್ದೆ/ ಕಾರ್ಯನಿರ್ವಹಿಸುವ ಸ್ಥಳ/ಆಯ್ಕೆ ಮಾಡಿಕೊಳ್ಳುವ ವಿಷಯ ಮತ್ತು ವಿಷಯ ಸಂಕೇತಗಳನ್ನು ಬಹು ಎಚ್ಚರಿಕೆಯಿಂದ ಭರ್ತಿ ಮಾಡಬೇಕು.** ತಪ್ಪಾಗಿ ಭರ್ತಿ ಮಾಡಿ ನಂತರ ಯಾವುದೇ ಮಾಹಿತಿಯ ಬದಲಾವಣೆ ಕೋರಿ ಸಲ್ಲಿಸಲಾಗುವ ಮನವಿಗಳನ್ನು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವಿಲ್ಲದೆ ಹಾಗೂ ಮುನ್ಸೂಚನೆ ನೀಡದೇ ನೇರವಾಗಿ ತಿರಸ್ಕರಿಸಲಾಗುವುದು ಮತ್ತು ಭಾವಚಿತ್ರ ಮತ್ತು ಸಹಿಯನ್ನು ಸರಿಯಾಗಿ ಅಪ್ ಲೋಡ್ ಮಾಡತಕ್ಕದ್ದು, ಇಲ್ಲದಿದ್ದಲ್ಲಿ ಕಡ್ಡಾಯವಾಗಿ ಅಭ್ಯರ್ಥಿಯ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

ಇ) ಆನ್‌ಲೈನ್ ಅರ್ಜಿಯಲ್ಲಿ ನೀವು ನೀಡುವ ಮಾಹಿತಿಗಳ ಆಧಾರದ ಮೇರೆಗೆ ಸದರಿ ಪರೀಕ್ಷೆಗೆ ಅವಕಾಶವನ್ನು ನೀಡಲಾಗುತ್ತದೆ. ತಪ್ಪು ಮಾಹಿತಿಗಳನ್ನು ನೀಡಿರುವುದು ಯಾವುದೇ ಹಂತದಲ್ಲಿ ಆಯೋಗದ ಗಮನಕ್ಕೆ ಬಂದಲ್ಲಿ ಅಂತಹ ಅಭ್ಯರ್ಥಿಗಳ ವಿರುದ್ಧ ಆಯೋಗವು ನಿಯಮಾನುಸಾರ ಶಿಸ್ತಿನ ಕ್ರಮಕ್ಕೈಗೊಳ್ಳುವುದು. ಅಲ್ಲದೇ ಅವರ ಉತ್ತೀರ್ಣತಾ ಪ್ರಮಾಣ ಪತ್ರವನ್ನು ಹಿಂದಕ್ಕೆ ಪಡೆಯಲಾಗುವುದು.

ಉ) ಅಭ್ಯರ್ಥಿಯು ಕರ್ನಾಟಕ ನಾಗರೀಕ ಸೇವೆಗಳು (ಸೇವೆಗಳು ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಾವಳಿಗಳು 1974ರ ರೀತ್ಯಾ ಷೆಡ್ಯೂಲ್-IIರಲ್ಲಿ ತಮ್ಮ ಇಲಾಖೆಯು ಕಡ್ಡಾಯಗೊಳಿಸಿದ ವಿಷಯಗಳಿಗೆ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು ಹಾಗೂ ತನಗೆ ಸಂಬಂಧಪಡದ ಇತರೇ ಇಲಾಖೆಗಳ ವಿಷಯಗಳಲ್ಲಿ ಪರೀಕ್ಷೆ ಬರೆಯಲು ಯಾವುದೇ ಕಾರಣಕ್ಕೂ ಅರ್ಜಿಯನ್ನು ಸಲ್ಲಿಸತಕ್ಕದ್ದಲ್ಲ. ಹಾಗೆಯೇ ಅಭ್ಯರ್ಥಿಯು ತಾನು ಶುಲ್ಕ ಸಂದಾಯ ಮಾಡಿರುವೆನೆಂಬ ಮಾತ್ರಕ್ಕೆ ಪರೀಕ್ಷೆ ಬರೆಯಲು ಹಕ್ಕುಳ್ಳವನಾಗಿರುವೆನೆಂದು ಭಾವಿಸತಕ್ಕದ್ದಲ್ಲ. ಈ ಬಗ್ಗೆ ಆಯೋಗದ ತೀರ್ಮಾನವೇ ಅಂತಿಮವಾಗಿರುತ್ತದೆ.

ಊ) ಒಮ್ಮೆ ಅರ್ಜಿ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂತಿರುಗಿಸಲಾಗುವುದಿಲ್ಲ ಅಥವಾ ಅದನ್ನು ಆಯೋಗವು ನಡೆಸುವ ಇತರೆ ಯಾವುದೇ ಅಧಿವೇಶನದ ಪರೀಕ್ಷೆಗಳಿಗೆ ಅಥವಾ ಇತರೆ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.

**ಋ) ನಿಗದಿಪಡಿಸಿದ ಕೊನೆಯ ದಿನಾಂಕದಂದು ಎದುರಾಗಬಹುದಾದ ಸಮಸ್ಯೆ/ ತಾಂತ್ರಿಕ ಸಮಸ್ಯೆಗಳಿಂದ ಪಾರಾಗಲು ಅಭ್ಯರ್ಥಿಗಳು Online ಮೂಲಕ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ಕಾಯದೇ ಆದಷ್ಟು ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸುವಂತೆ ಆಯೋಗವು ಸೂಚಿಸುತ್ತದೆ.**

*****

## ಅನುಬಂಧ-3

## ಸಬಾರ್ಡಿನೇಟ್ ಅಕೌಂಟ್ಸ್ ಸರ್ವೀಸ್ (ಎಸ್ಎಎಸ್) ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವ ಅಭ್ಯರ್ಥಿಗಳಿಗೆ ವಿಶೇಷವಾದ ಸೂಚನೆಗಳು:-

ಅ) ಕರ್ನಾಟಕ ನಾಗರಿಕ ಸೇವೆಗಳು (ಸೇವೆಗಳು ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974ರಲ್ಲಿನ ಷೆಡ್ಯೂಲ್-Iರ ಕಂಡಿಕೆ (12) ರಡಿ ಇರುವ ಟಿಪ್ಪಣಿ- (ii) ಈ ಕೆಳಂಡಂತಿದೆ.

> "(ii) Officials who are required to pass the Subordinate Accounts Service Examinations as specified in Schedule II and who have put in a Service of not less than three Years as I Division Clerks and Six Years as II Division Clerks from the date of their appointment and passed the Accounts Higher Examination or its equivalent examination, are eligible to sit for the said examination."

ಆ) ಅಲ್ಲದೇ ಸದರಿ ನಿಯಮದ ಷೆಡ್ಯೂಲ್-2 ರಲ್ಲಿ ಕಡ್ಡಾಯಗೊಳಿಸದಿದ್ದರೂ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಭ್ಯರ್ಥಿಗಳಿಗೆ ಪರಿವೀಕ್ಷಣಾ ಅವಧಿ ಘೋಷಣೆಗೆ ಅಥವಾ ಮುಂಬಡ್ತಿಗೆ ಎಸ್.ಎ.ಎಸ್ ವಿಷಯಗಳನ್ನು ನಿಗದಿಪಡಿಸಿದ್ದಲ್ಲಿ ಅಂತಹ ಸರ್ಕಾರಿ ಇಲಾಖೆಗಳು ಹಾಗೂ ಸರ್ಕಾರದ ಸ್ವಾಮ್ಯಕ್ಕೊಳಪಟ್ಟ ಮಂಡಳಿ/ನಿಗಮ/ಸ್ಥಳೀಯ ಸಂಸ್ಥೆ/ ಸ್ವಾಯತ್ತ ಸಂಸ್ಥೆಗಳು/ ವಿಶ್ವವಿದ್ಯಾಲಯಗಳು/ ಪ್ರಾಧಿಕಾರಗಳ ನೌಕರರುಗಳು ಆನ್‌ಲೈನ್ ಅರ್ಜಿಯಲ್ಲಿನ ಸಂಬಂಧಿತ ಅಂಕಣಗಳಲ್ಲಿ ಈ ಬಗ್ಗೆ ಸರಿಯಾದ ಮಾಹಿತಿಯನ್ನು ನೀಡಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರತಿಯನ್ನು ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕು.

ಇ) ಅಕೌಂಟ್ಸ್ ಹೈಯರ್ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಲ್ಲಿ ಮಾತ್ರ ಸದರಿ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಆದರೆ ಪರಿವೀಕ್ಷಣಾ ಅವಧಿ ಘೋಷಣೆಗೆ ಎಸ್ಎಎಸ್ ವಿಷಯಗಳಲ್ಲಿ ಉತ್ತೀರ್ಣರಾಗುವುದನ್ನು ಕಡ್ಡಾಯಗೊಳಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳು ಅಕೌಂಟ್ಸ್ ಹೈಯರ್ ಪ್ರಮಾಣ ಪತ್ರದ ಪ್ರತಿಯನ್ನು ಅಪ್‌ಲೋಡ್ ಮಾಡುವ ಅವಶ್ಯಕತೆ ಇರುವುದಿಲ್ಲ.

ಈ) ವಿಷಯಗಳಿಗೆ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಅವರ ಸೇವಾ ಅವಧಿಯನ್ನು ಮತ್ತು ಅಕೌಂಟ್ಸ್ ಹೈಯರ್ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾದ ಬಗ್ಗೆ ವಿವರಗಳನ್ನು ಆನ್‌ಲೈನ್ ಅರ್ಜಿಯ ನಿಗದಿತ ಅಂಕಣದಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು ಹಾಗೂ ಅಕೌಂಟ್ಸ್ ಹೈಯರ್ ಪ್ರಮಾಣ

ಪತ್ರವನ್ನು ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಬೇಕು. ಆನ್‌ಲೈನ್ ಅರ್ಜಿಯೊಂದಿಗೆ ಅವಶ್ಯ ದಾಖಲೆಗಳನ್ನು ಅಪ್‌ಲೋಡ್ ಮಾಡದೆ ತದ ನಂತರ ಸಲ್ಲಿಸುವ ದಾಖಲೆಗಳು/ ಅರ್ಜಿ/ ಮನವಿಗಳನ್ನು/ ಶುಲ್ಕವನ್ನು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವಿಲ್ಲದೆ/ ಸೂಚನೆಯನ್ನು ನೀಡದೆ ತಿರಸ್ಕರಿಸಲಾಗುವುದು.

ಎಸ್ ಎ ಎಸ್ ವಿಷಯಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಅನುಬಂಧ-ಬಿ ನಲ್ಲಿರುವ ವಿವರಗಳನ್ನು ಭರ್ತಿ ಮಾಡಿ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಂದ ದೃಢೀಕರಿಸಿ ಆನ್ ಲೈನ್ ಅರ್ಜಿಯೊಂದಿಗೆ ಅಪ್ ಲೋಡ್ ಮಾಡತಕ್ಕದ್ದು. ಅನುಬಂಧ-ಬಿ ನಮೂನೆಯನ್ನು ಪುಟ ಸಂಖ್ಯೆ 13 & 14 ರಲ್ಲಿ ನೋಡಬಹುದಾಗಿದೆ.

ಅಭ್ಯರ್ಥಿಯು ಆಧಾರ್ ಸಂಖ್ಯೆಯೊಂದಿಗೆ ಸೇವಾ ಸಿಂಧುನಲ್ಲಿ ಲಾಗಿನ್ ಆಗುವುದರಿಂದ ಹಾಗೂ ಉತ್ತೀರ್ಣತಾ ಪ್ರಮಾಣ ಪತ್ರಗಳನ್ನು Digilocker ನಿಂದ ಆನ್ ಲೈನ್ ಮೂಲಕ ಪಡೆದುಕೊಳ್ಳುವುದರಿಂದ ಅಭ್ಯರ್ಥಿಗಳು ತಮ್ಮ ಹೆಸರು ಸೇವಾ ಪುಸ್ತಕದಲ್ಲಿರುವಂತೆ ಆಧಾರ್ ನಲ್ಲಿಯೂ ಒಂದೇ ತರಹ ಇರುವಂತೆ ನೋಡಿಕೊಳ್ಳತಕ್ಕದ್ದು.

**ಕರ್ನಾಟಕ ಲೋಕಸೇವಾ ಆಯೋಗ**

**ಅನುಬಂಧ-`ಬಿ'**

**ಕಛೇರಿ ಮುಖ್ಯಸ್ಥರು ನೀಡಬೇಕಿರುವ ದೃಢೀಕರಣ ಪತ್ರ**

**ಸಬಾರ್ಡಿನೇಟ್ ಅಕೌಂಟ್ಸ್ ಸರ್ವೀಸ್ (ಎಸ್.ಎ.ಎಸ್.) ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವ ಅಭ್ಯರ್ಥಿಗಳಿಗೆ ಮಾತ್ರ**

| ಕ್ರ.ಸಂ. | ವಿವರಗಳು | ಷರಾ |
|---|---|---|
| 1. | ಅಭ್ಯರ್ಥಿಯ ಹೆಸರು (ಸೇವಾ ಪುಸ್ತಕದಲ್ಲಿರುವಂತೆ) | |
| 2. | 1. ಸರ್ಕಾರಿ ಸೇವೆಗೆ ಸೇರಿದ ದಿನಾಂಕ ಹಾಗೂ ಪದನಾಮ<br>2. ಪ್ರಸಕ್ತ ಕಾರ್ಯ ನಿರ್ವಹಿಸುತ್ತಿರುವ ಪದನಾಮ ಮತ್ತು ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕ ಹಾಗೂ ಸೇವೆ ಸಲ್ಲಿಸುತ್ತಿರುವ ಇಲಾಖೆಯ ಹೆಸರು: | |
| 3. | ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ ಮಾತೃ ಇಲಾಖೆ (Parent Department)ಯ ಹೆಸರು | |
| 4. | ವೃಂದ ಬದಲಾವಣೆ ಮಾಡಿಕೊಳ್ಳಲಾಗಿದೆಯೇ? ಹಾಗಿದ್ದಲ್ಲಿ ಯಾವ ಹುದ್ದೆಯಿಂದ ಯಾವ ಹುದ್ದೆಗೆ ಮತ್ತು ದಿನಾಂಕಗಳ ವಿವರ | |
| 5. | ಪದೋನ್ನತಿಯಾಗಿದೆಯೇ? ಯಾವ ಹುದ್ದೆಯಿಂದ ಯಾವ ಹುದ್ದೆಗಳಿಗೆ (ಹುದ್ದೆವಾರು ಮತ್ತು ದಿನಾಂಕವಾರು ಸೇವಾವಧಿಯ ಸಂಪೂರ್ಣ ವಿವರಗಳನ್ನು ನಮೂದಿಸತಕ್ಕದ್ದು) | |
| 6. | ಅಕೌಂಟ್ಸ್ ಹೈಯರ್ ವಿಷಯದಲ್ಲಿ ತೇರ್ಗಡೆ ಹೊಂದಿರುವರೇ? ಹೌದು ಎಂದಾದಲ್ಲಿ ಅದರ ವಿವರ<br>ಸೂಚನೆ:- ಅರ್ಜಿ ಸಲ್ಲಿಸುವಾಗ ಅಕೌಂಟ್ಸ್ ಹೈಯರ್ ಪ್ರಮಾಣ ಪತ್ರವನ್ನು ಅಪ್‌ಲೋಡ್ ಮಾಡಬೇಕು. ಇಲ್ಲವಾದಲ್ಲಿ ಅರ್ಜಿ ತಿರಸ್ಕೃತವಾಗುತ್ತದೆ. | (ಹೌದು / ಇಲ್ಲ) ಹೌದಾದಲ್ಲಿ ಈ ಕೆಳಗಿನ ವಿವರಗಳನ್ನು ಕಡ್ಡಾಯವಾಗಿ ನೀಡುವುದು<br>ನೋಂ.ಸಂ :<br>ವರ್ಷ :<br>ಅಧಿವೇಶನ : |
| 7. | 1) ಕರ್ನಾಟಕ ನಾಗರೀಕ ಸೇವಾ (ಸೇವೆ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974ರನ್ವಯ ಸದರಿ ಅಭ್ಯರ್ಥಿಯ ಪದನಾಮಕ್ಕೆ/ Probationary Period | (ಹೌದು / ಇಲ್ಲ) (ಸ್ಪಷ್ಟವಾಗಿ ಬರೆಯಬೇಕು) |

| | | |
|---|---|---|
| | ಘೋಷಣೆಗೆ ಎಸ್.ಎ.ಎಸ್. ವಿಷಯವನ್ನು ನಿಗದಿಪಡಿಸಲಾಗಿದೆಯೇ? | |
| | 2) ಸದರಿ ನಿಯಮಗಳನ್ವಯ ಅಭ್ಯರ್ಥಿಯ ಮುಂಬಡ್ತಿಗೆ ಎಸ್.ಎ.ಎಸ್. ವಿಷಯಗಳನ್ನು ಕಡ್ಡಾಯಗೊಳಿಸಲಾಗಿದೆಯೇ? | (ಹೌದು / ಇಲ್ಲ) (ಸ್ಪಷ್ಟವಾಗಿ ಬರೆಯಬೇಕು) |
| | 3) 1974ರ ನಿಯಮದಲ್ಲಿ ಅಳವಡಿಸದಿದ್ದರೂ ಅವರ ಮುಂಬಡ್ತಿಯ ಸಲುವಾಗಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಎಸ್.ಎ.ಎಸ್. ವಿಷಯವನ್ನು ಕಡ್ಡಾಯಗೊಳಿಸಲಾಗಿದೆಯೇ? | (ಹೌದು / ಇಲ್ಲ) (ಸ್ಪಷ್ಟವಾಗಿ ಬರೆಯಬೇಕು) |

ಮೇಲ್ಕಂಡ ಮಾಹಿತಿಯನ್ನು ಸಂಬಂಧಿತರ ಸೇವಾ ದಾಖಲೆ ಮತ್ತು ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳ ಆಧಾರದ ಮೇರೆಗೆ ನೀಡುತ್ತಾ, ಸದರಿಯವರು ಎಸ್.ಎ.ಎಸ್. ವಿಷಯಗಳ ಪರೀಕ್ಷೆಗಳನ್ನು ತೆಗೆದುಕೊಳ್ಳುವುದು ಕಡ್ಡಾಯವಾಗಿರುತ್ತದೆಂದು ಈ ಮೂಲಕ ದೃಢೀಕರಿಸುತ್ತೇನೆ.

**<u>ಸೂಚನೆ:-</u> ಎಸ್.ಎ.ಎಸ್. ವಿಷಯಗಳಿಗೆ ಸಂಬಂಧಿಸಿದಂತೆ, ಅನುಬಂಧ-ಬಿ ನಲ್ಲಿನ ಕ್ರಮ ಸಂಖ್ಯೆ 7 ರಲ್ಲಿನ (03) ಅಂಶಗಳನ್ನು ಕಛೇರಿ ಮುಖ್ಯಸ್ಥರು ಪರಿಶೀಲಿಸಿ, ಒಂದರಲ್ಲಾದರೂ 'ಹೌದು' ಎಂದು ಕಡ್ಡಾಯವಾಗಿ ನಮೂದಿಸಿ ದೃಢೀಕರಿಸಿದಲ್ಲಿ ಮಾತ್ರ ಎಸ್.ಎ.ಎಸ್. ವಿಷಯಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದು. ಇಲ್ಲವಾದಲ್ಲಿ ಅಭ್ಯರ್ಥಿಯ ಎಸ್.ಎ.ಎಸ್. ವಿಷಯವನ್ನು ತಿರಸ್ಕರಿಸಲಾಗುವುದು.**

ದಿನಾಂಕ: ಕಛೇರಿ ಮುಖ್ಯಸ್ಥರ ಸಹಿ:

ಸ್ಥಳ ಹೆಸರು:

ಪದನಾಮ:

ಮೊಹರು:

*****

## ಅನುಬಂಧ-4

**ವಿಷಯದ ಹೆಸರು, ವಿಷಯದ ಸಂಕೇತಗಳು ಮತ್ತು ಪ್ರತಿ ವಿಷಯಕ್ಕೆ ನಿಗದಿಪಡಿಸಿ ಶುಲ್ಕದ ವಿವರಗಳು:-**

ಇಲಾಖಾ ಪರೀಕ್ಷೆಗಳಿಗೆ ಸಂಬಂಧಿಸಿದ ಕೆಲವು ವಿಷಯಗಳಿಗೆ/ಪತ್ರಿಕೆಗಳಿಗೆ ವಸ್ತುನಿಷ್ಠ ಬಹು ಆಯ್ಕೆ ಮಾದರಿಯಲ್ಲಿ ಹಾಗೂ ಇನ್ನು ಕೆಲವು ವಿಷಯಗಳಿಗೆ /ಪತ್ರಿಕೆಗಳಿಗೆ ವಿವರಣಾತ್ಮಕ ಮಾದರಿಯಲ್ಲಿ ಪರೀಕ್ಷೆಗಳನ್ನು ನಡೆಸಲಾಗುವುದು. ವಸ್ತುನಿಷ್ಠ ಮಾದರಿ ಮತ್ತು ವಿವರಣಾತ್ಮಕ ಮಾದರಿಯ ಪರೀಕ್ಷೆ ನಡೆಸಲಾಗುವ ವಿಷಯಗಳ /ಪತ್ರಿಕೆಗಳ ವಿವರಗಳು ಈ ಕೆಳಗಿನಂತಿದೆ.

(1) ವಸ್ತುನಿಷ್ಠ ಬಹುಆಯ್ಕೆ ಮಾದರಿಯ (OBJECTIVE TYPE MULTIPLE CHOICE) ವಿಷಯಗಳು/ಪತ್ರಿಕೆಗಳು :-

| ಕ್ರಮ ಸಂಖ್ಯೆ | ವಿಷಯ | ವಿಷಯ ಸಂಕೇತ |
|---|---|---|
| 1 | ಅಕೌಂಟ್ಸ್ ಲೋಯರ್ | 01 |
| 2 | ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ-1 | 02 |
| 3 | ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ-2 | 03 |
| 4 | ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್ | 04 |
| 5 | ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಲೋಯರ್ | 05 |
| 6 | ಫಾರೆಸ್ಟ್ ಪತ್ರಿಕೆ-1 (ಫಾರೆಸ್ಟ್ ಗಾರ್ಡ್‌ಗಳಿಗೆ ಮಾತ್ರ) | 06 |
| 7 | ಫಾರೆಸ್ಟ್ ಪತ್ರಿಕೆ-2 (ಫಾರೆಸ್ಟ್ ಗಾರ್ಡ್‌ಗಳಿಗೆ ಮಾತ್ರ) | 07 |
| 8 | ಜನರಲ್ ಲಾ ಭಾಗ-2 | 08 |
| 9 | ಹೋಮ್ ಗಾರ್ಡ್ ಮ್ಯಾನ್ಯುಯಲ್ | 09 |
| 10 | ಆಕ್ಟ್ ಅಂಡ್ ರೂಲ್ಸ್ ರಿಲೇಟಿಂಗ್ ಟು ವಿಮೆನ್ ಅಂಡ್ ಚೈಲ್ಡ್ ಡೆವಲಪ್‌ಮೆಂಟ್ | 10 |
| 11 | ಮೋಟಾರ್ ವೆಹಿಕಲ್ಸ್ | 11 |
| 12 | ಮೈನಿಂಗ್ ಭಾಗ-1 | 12 |
| 13 | ಮೈನಿಂಗ್ ಭಾಗ-2 | 13 |
| 14 | ಪ್ರಿಸನ್ಸ್ | 14 |
| 15 | ಪೋರ್ಟ್ಸ್ ಹೈಯರ್ | 15 |
| 16 | ಪೋರ್ಟ್ಸ್ ಲೋಯರ್ | 16 |
| 17 | ಸೋಷಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಭಾಗ-1 | 17 |
| 18 | ಸೋಷಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಭಾಗ-2 | 18 |
| 19 | ಯೂಥ್ ಸರ್ವೀಸ್ ಮ್ಯಾನ್ಯುಯಲ್ | 19 |
| 20 | ಎಕ್ಸೈಸ್ | 20 |
| 21 | ಪೊಲೀಸ್ ಮ್ಯಾನ್ಯುಯಲ್ | 21 |

| | | |
|---|---|---|
| 22 | ಅಕೌಂಟ್ಸ್ ಹೈಯರ್ | 22 |
| 23 | ಕಮರ್ಷಿಯಲ್ ಟ್ಯಾಕ್ಸ್ ಭಾಗ-2 (ಲೋಯರ್) | 23 |
| 24 | ಫಾರೆಸ್ಟ್ | 24 |
| 25 | ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಲಾಸ್ | 25 |
| 26 | ಲೇಬರ್ | 26 |
| 27 | ಲೋಕಲ್ ಲಾಸ್ ಆಂಡ್ ಕಮರ್ಷಿಯಲ್ ಬುಕ್ ಕೀಪಿಂಗ್ | 27 |
| 28 | ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಹೈಯರ್ ಪತ್ರಿಕೆ-01 | 28 |
| 29 | ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಲೋಯರ್ | 29 |
| 30 | ಪಿ.ಡಬ್ಲ್ಯೂ.ಡಿ ಹೈಯರ್ ಭಾಗ-1 ರಲ್ಲಿ ಪತ್ರಿಕೆ-02 | 30 |
| 31 | ಪಿ.ಡಬ್ಲ್ಯೂ.ಡಿ ಹೈಯರ್ ಭಾಗ-2 | 31 |
| 32 | ಪಿ.ಡಬ್ಲ್ಯೂ.ಡಿ. ಲೋಯರ್ | 32 |
| 33 | ರಿಜಿಸ್ಟ್ರೇಷನ್ | 33 |
| 34 | ಸಿರಿಕಲ್ಚರ್ | 34 |
| 35 | ಕೋ-ಆಪರೇಷನ್ | 35 |
| 36 | ಜನರಲ್ ಲಾ ಭಾಗ-1 | 36 |
| 37 | ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ | 37 |
| 38 | ಮಾರ್ಕೆಟಿಂಗ್ | 38 |
| 39 | ರೆವಿನ್ಯೂ ಹೈಯರ್ ಭಾಗ-1 | 39 |
| 40 | ರೆವಿನ್ಯೂ ಹೈಯರ್ ಭಾಗ-2 | 40 |
| 41 | ರೆವಿನ್ಯೂ ಲೋಯರ್ | 41 |
| 42 | ಕಮರ್ಷಿಯಲ್ ಟ್ಯಾಕ್ಸ್ ಭಾಗ-1 (ಹೈಯರ್) | 42 |
| 43 | ಕೋ-ಆಪರೇಟಿವ್ ಆಡಿಟ್ ಎಕ್ಸಾಮಿನೇಷನ್ | 43 |
| 44 | ಇನ್ಶೂರೆನ್ಸ್ ಅಡ್ವಾನ್ಸ್ಡ್ | 44 |
| 45 | ಇನ್ಶೂರೆನ್ಸ್ ಹೈಯರ್ ಪತ್ರಿಕೆ-01 ಮತ್ತು ಪತ್ರಿಕೆ-03 | 45 |
| 46 | ಇನ್ಶೂರೆನ್ಸ್ ಲೋಯರ್ ಪತ್ರಿಕೆ-01 ಮತ್ತು ಪತ್ರಿಕೆ-03 | 46 |
| 47 | ಫುಡ್ ಅಂಡ್ ಸಿವಿಲ್ ಸಪ್ಲೈಸ್ ಎಕ್ಸಾಮಿನೇಷನ್ | 48 |
| 48 | ಕರ್ನಾಟಕ ಕನ್ಸ್ಯೂಮರ್ ಪ್ರೊಟೆಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ಟ್ ಫೋರಮ್ ಸರ್ವೀಸ್ ಎಕ್ಸಾಮಿನೇಷನ್ | 49 |
| 49 | ಇಂಡಿಯನ್ ಕಾಂಟ್ರಕ್ಟ್ ಆಕ್ಟ್ | 51 |
| 50 | ಕೆ.ಪಿ.ಎಸ್.ಸಿ. ಮ್ಯಾನ್ಯುಯಲ್ | 52 |
| 51 | ಕೆ.ಪಿ.ಎಸ್.ಸಿ. ರಿಕ್ರೂಟ್‌ಮೆಂಟ್ ರೂಲ್ಸ್ | 53 |
| 52 | ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ-1 | 54 |
| 53 | ಸ್ಪೆಷಲ್ ಲಾಸ್ ಅಂಡ್ ಸರ್ವೀಸ್ ರೂಲ್ಸ್ | 56 |
| 54 | ಎಸ್.ಎ.ಎಸ್. ಭಾಗ-1, ಪತ್ರಿಕೆ-02 | 61 |
| 55 | ಎಸ್.ಎ.ಎಸ್. ಭಾಗ-2, ಪತ್ರಿಕೆ-01 | 62 |

| | | |
|---|---|---|
| 56 | ಎಸ್.ಎ.ಎಸ್. ಭಾಗ-3, ಪತ್ರಿಕೆ-02 ಮತ್ತು ಪತ್ರಿಕೆ-04 | 63 |
| 57 | ಟ್ರೆಜರಿ ಅಕೌಂಟ್ಸ್ ಭಾಗ-1 ಪತ್ರಿಕೆ-02 ಮತ್ತು ಪತ್ರಿಕೆ-03 | 64 |
| 58 | ಟ್ರೆಜರಿ ಅಕೌಂಟ್ಸ್ ಭಾಗ-2 | 65 |
| 59 | ಎಲೆಕ್ಟ್ರಿಸಿಟಿ ಲಾಸ್ ಎಕ್ಸಾಮಿನೇಷನ್ | 66 |
| 60 | ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಹೈಯರ್) ಎಕ್ಸಾಮಿನೇಷನ್ ಭಾಗ-1 | 67 |
| 61 | ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಲೋಯರ್) ಎಕ್ಸಾಮಿನೇಷನ್ | 70 |
| 62 | ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್ ಎಕ್ಸಾಮಿನೇಷನ್ | 71 |
| 63 | ವಿಕಲ ಚೇತನರು ಮತ್ತು ಹಿರಿಯ ನಾಗರೀಕರಿಗೆ ಸಂಬಂಧಿಸಿದ ಅಧಿನಿಯಮ ಮತ್ತು ನಿಯಮಗಳು | 74 |
| 64 | ಅಗ್ನಿಶಾಮಕ ಅಧಿನಿಯಮ 1964, ನಿಯಮಗಳು ಮತ್ತು ಕೈಪಿಡಿ | 75 |

**(2) ವಿವರಣಾತ್ಮಕ ಮಾದರಿಯ (Descriptive Type) ವಿಷಯಗಳು/ಪತ್ರಿಕಗಳು:-**

| ಕ್ರಮ ಸಂಖ್ಯೆ | ವಿಷಯ | ವಿಷಯ ಸಂಕೇತ |
|---|---|---|
| 1 | ಪ್ರೆಸ್ ಅಂಟ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಹೈಯರ್, ಪತ್ರಿಕೆ-02 | 28 |
| 2 | ಪಿ.ಡಬ್ಲ್ಯೂ.ಡಿ. ಹೈಯರ್ ಭಾಗ-1, ಪತ್ರಿಕೆ-1 | 30 |
| 3 | ಇನ್ಶೂರೆನ್ಸ್ ಹೈಯರ್, ಪತ್ರಿಕೆ-2 | 45 |
| 4 | ಇನ್ಶೂರೆನ್ಸ್ ಲೋಯರ್, ಪತ್ರಿಕೆ-2 | 46 |
| 5 | ಕನ್ನಡ ಭಾಷೆ, ಪತ್ರಿಕೆ-1 ಮತ್ತು ಪತ್ರಿಕೆ-2 | 47 |
| 6 | ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ-2 | 55 |
| 7 | ಟ್ರಾನ್ಸ್‌ಲೇಷನ್ ಟೆಸ್ಟ್ | 58 |
| 8 | ಎಸ್.ಎ.ಎಸ್. ಭಾಗ-1, ಪತ್ರಿಕೆ-1 ಮತ್ತು ಪತ್ರಿಕೆ-3 | 61 |
| 9 | ಎಸ್.ಎ.ಎಸ್. ಭಾಗ-2, ಪತ್ರಿಕೆ-2 ಮತ್ತು ಪತ್ರಿಕೆ-3 | 62 |
| 10 | ಎಸ್.ಎ.ಎಸ್. ಭಾಗ-3, ಪತ್ರಿಕೆ-1,ಪತ್ರಿಕೆ-3 ಮತ್ತು ಪತ್ರಿಕೆ-5 | 63 |
| 11 | ಟ್ರೆಜರಿ ಅಕೌಂಟ್ಸ್ ಭಾಗ-1, ಪತ್ರಿಕೆ-1 | 64 |
| 12 | ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಹೈಯರ್) ಎಕ್ಸಾಮಿನೇಷನ್ ಭಾಗ-2, ಪತ್ರಿಕೆ-1 | 68 |
| 13 | ಕನ್ನಡ ಭಾಷೆ (ಐ.ಎ.ಎಸ್. ಐ.ಪಿ.ಎಸ್ ಮತ್ತು ಐ.ಎಫ್.ಎಸ್ ಅಧಿಕಾರಿಗಳಿಗೆ) ಪತ್ರಿಕೆ-1 ಮತ್ತು ಪತ್ರಿಕೆ-2 | 72 |

**ವಿಶೇಷ ಸೂಚನೆ:-**

(1) ವಿವರಣಾತ್ಮಕ ಮಾದರಿಯ ಪತ್ರಿಕೆಗಳಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಪ್ರಶ್ನೆಸಹಿತ ಉತ್ತರಪತ್ರಿಕೆಯಲ್ಲಿ ಯಾವುದೇ ಪತ್ರಿಕೆಯನ್ನು ಸಂಪೂರ್ಣವಾಗಿ ಆಂಗ್ಲಭಾಷೆಯಲ್ಲಿ ಅಥವಾ ಸಂಪೂರ್ಣವಾಗಿ ಕನ್ನಡ ಭಾಷೆಯಲ್ಲಿ ಮಾತ್ರ ಉತ್ತರಿಸತಕ್ಕದ್ದು. (ಭಾಷಾಂತರ (Translation) ಪ್ರಶ್ನೆ ಹೊರತುಪಡಿಸಿ) ಭಾಗಶಃ ಆಂಗ್ಲ ಮತ್ತು ಭಾಗಶಃ ಕನ್ನಡದಲ್ಲಿ ಉತ್ತರಿಸತಕ್ಕದ್ದಲ್ಲ.

(2) ಅಭ್ಯರ್ಥಿಯು ಪ್ರಶ್ನೆ ಸಹಿತ ಉತ್ತರ ಪತ್ರಿಕೆಯಲ್ಲಿ ನೀಡಲಾದ ಪ್ರಶ್ನೆಗಳಿಗೆ ನಿಗದಿಪಡಿಸಿದ ಜಾಗದಲ್ಲಿ ಮಾತ್ರ ಉತ್ತರಗಳನ್ನು ಬರೆಯತಕ್ಕದ್ದು. ಅಭ್ಯರ್ಥಿಗಳು ಪ್ರಶ್ನೆಸಹಿತ ಉತ್ತರಪತ್ರಿಕೆಯಲ್ಲಿ ನಿಗದಿಪಡಿಸಿದ ಸ್ಥಳದಲ್ಲಿಯೇ ನೋಂದಣಿ ಸಂಖ್ಯೆಯನ್ನು ನಮೂದಿಸತಕ್ಕದ್ದು. ಉತ್ತರಪತ್ರಿಕೆಯ ಒಳಪುಟಗಳಲ್ಲಿ ಅಭ್ಯರ್ಥಿಗಳು ತಮ್ಮ ನೋಂದಣಿ ಸಂಖ್ಯೆಯನ್ನಾಗಲೀ, ಹೆಸರು, ಓಂ, ಸ್ವಸ್ತಿಕ್ ಇತ್ಯಾದಿ ಗುರುತುಗಳನ್ನು ಮಾಡಬಾರದು. ಈ ರೀತಿಯ ಗುರುತುಗಳನ್ನು ಮಾಡಿರುವುದು ಕಂಡುಬಂದಲ್ಲಿ **ಅದನ್ನು ಪರೀಕ್ಷಾ ಅಕ್ರಮವೆಂದು ತೀರ್ಮಾನಿಸಿ "ದುರಾಚಾರ ಪ್ರಕರಣ" ಎಂದು ಪರಿಗಣಿಸಿ ಅಭ್ಯರ್ಥಿಯ ಅಭ್ಯರ್ಥಿತ್ವವನ್ನು ರದ್ದುಗೊಳಿಸುವುದಲ್ಲದೆ, ಆಯೋಗವು ತೆಗೆದುಕೊಳ್ಳುವ ಶಿಸ್ತು ಕ್ರಮಕ್ಕೆ ಅಭ್ಯರ್ಥಿಯು ಒಳಗಾಗಬೇಕಾಗುತ್ತದೆ."**

**ವಿಷಯದ ಹೆಸರು, ವಿಷಯದ ಸಂಕೇತಗಳು ಮತ್ತು ಪ್ರತಿ ವಿಷಯಕ್ಕೆ ನಿಗದಿಪಡಿಸಿದ ಶುಲ್ಕದ ವಿವರಗಳು:-**

ಇಲಾಖಾ ಪರೀಕ್ಷೆಯ ವಿವಿಧ ವಿಷಯಗಳ ಹೆಸರುಗಳು, ಅವುಗಳ ಸಂಕೇತಗಳು ಹಾಗೂ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 6 ಸೇಲೋಸೇ 2010, ದಿನಾಂಕ:06-08-2010 ರನ್ವಯ ನಿಗದಿಪಡಿಸಿರುವ ಪರಿಷ್ಕೃತ ಶುಲ್ಕಗಳ ವಿವರಗಳು ಈ ಕೆಳಕಂಡಂತಿವೆ.

| ಕ್ರಮ ಸಂಖ್ಯೆ | ವಿಷಯ | ವಿಷಯ ಸಂಕೇತ | ನಿಗದಿಪಡಿಸಲಾದ ಶುಲ್ಕ |
|---|---|---|---|
| 1 | ಅಕೌಂಟ್ಸ್ ಲೋಯರ್ | 01 | 50-00 |
| 2 | ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ-1 | 02 | 50-00 |
| 3 | ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ-2 | 03 | 50-00 |
| 4 | ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್ | 04 | 50-00 |
| 5 | ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಲೋಯರ್ | 05 | 50-00 |
| 6 | ಫಾರೆಸ್ಟ್ ಪತ್ರಿಕೆ-1 (ಫಾರೆಸ್ಟ್ ಗಾರ್ಡ್‌ಗಳಿಗೆ ಮಾತ್ರ) | 06 | 50-00 |
| 7 | ಫಾರೆಸ್ಟ್ ಪತ್ರಿಕೆ-2 (ಫಾರೆಸ್ಟ್ ಗಾರ್ಡ್‌ಗಳಿಗೆ ಮಾತ್ರ) | 07 | 50-00 |
| 8 | ಜನರಲ್ ಲಾ ಭಾಗ-2 | 08 | 50-00 |
| 9 | ಹೋಮ್ ಗಾರ್ಡ್ ಮ್ಯಾನ್ಯುಯಲ್ | 09 | 50-00 |

| | | | |
|---|---|---|---|
| 10 | ಆಕ್ಟ್ ಅಂಡ್ ರೂಲ್ಸ್ ರಿಲೇಟಿಂಗ್ ಟು ವಿಮೆನ್ ಅಂಡ್ ಚೈಲ್ಡ್ ಡೆವಲಪ್‌ಮೆಂಟ್ | 10 | 50-00 |
| 11 | ಮೋಟಾರ್ ವೆಹಿಕಲ್ಸ್ | 11 | 50-00 |
| 12 | ಮೈನಿಂಗ್ ಭಾಗ-1 | 12 | 50-00 |
| 13 | ಮೈನಿಂಗ್ ಭಾಗ-2 | 13 | 50-00 |
| 14 | ಪ್ರಿಸನ್ಸ್ | 14 | 50-00 |
| 15 | ಪೋರ್ಟ್ಸ್ ಹೈಯರ್ | 15 | 50-00 |
| 16 | ಪೋರ್ಟ್ಸ್ ಲೋಯರ್ | 16 | 50-00 |
| 17 | ಸೋಷಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಭಾಗ-1 | 17 | 50-00 |
| 18 | ಸೋಷಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಭಾಗ-2 | 18 | 50-00 |
| 19 | ಯೂಥ್ ಸರ್ವೀಸ್ ಮ್ಯಾನ್ಯುಯಲ್ | 19 | 50-00 |
| 20 | ಎಕ್ಸೈಸ್ | 20 | 50-00 |
| 21 | ಪೊಲೀಸ್ ಮ್ಯಾನ್ಯುಯಲ್ | 21 | 50-00 |
| 22 | ಅಕೌಂಟ್ಸ್ ಹೈಯರ್ | 22 | 100-00 |
| 23 | ಕಮರ್ಷಿಯಲ್ ಟ್ಯಾಕ್ಸ್ ಭಾಗ-2 (ಲೋಯರ್) | 23 | 100-00 |
| 24 | ಫಾರೆಸ್ಟ್ | 24 | 100-00 |
| 25 | ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಲಾಸ್ | 25 | 100-00 |
| 26 | ಲೇಬರ್ | 26 | 100-00 |
| 27 | ಲೋಕಲ್ ಲಾಸ್ ಅಂಡ್ ಕಮರ್ಷಿಯಲ್ ಬುಕ್ ಕೀಪಿಂಗ್ | 27 | 100-00 |
| 28 | ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಹೈಯರ್ | 28 | 100-00 |
| 29 | ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಲೋಯರ್ | 29 | 100-00 |
| 30 | ಪಿ.ಡಬ್ಲ್ಯೂ.ಡಿ ಹೈಯರ್ ಭಾಗ-1 | 30 | 100-00 |
| 31 | ಪಿ.ಡಬ್ಲ್ಯೂ.ಡಿ ಹೈಯರ್ ಭಾಗ-2 | 31 | 100-00 |
| 32 | ಪಿ.ಡಬ್ಲ್ಯೂ.ಡಿ. ಲೋಯರ್ | 32 | 100-00 |
| 33 | ರಿಜಿಸ್ಟ್ರೇಷನ್ | 33 | 100-00 |
| 34 | ಸಿರಿಕಲ್ಚರ್ | 34 | 100-00 |
| 35 | ಕೋ-ಆಪರೇಷನ್ | 35 | 100-00 |
| 36 | ಜನರಲ್ ಲಾ ಭಾಗ-1 | 36 | 100-00 |
| 37 | ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ | 37 | 100-00 |
| 38 | ಮಾರ್ಕೆಟಿಂಗ್ | 38 | 100-00 |
| 39 | ರೆವಿನ್ಯೂ ಹೈಯರ್ ಭಾಗ-1 | 39 | 100-00 |
| 40 | ರೆವಿನ್ಯೂ ಹೈಯರ್ ಭಾಗ-2 | 40 | 100-00 |
| 41 | ರೆವಿನ್ಯೂ ಲೋಯರ್ | 41 | 100-00 |

| | | | |
|---|---|---|---|
| 42 | ಕಮರ್ಷಿಯಲ್ ಟ್ಯಾಕ್ಸ್ ಭಾಗ-1 (ಹೈಯರ್) | 42 | 100-00 |
| 43 | ಕೋ-ಆಪರೇಟಿವ್ ಆಡಿಟ್ ಎಕ್ಸಾಮಿನೇಷನ್ | 43 | 100-00 |
| 44 | ಇನ್ಶೂರೆನ್ಸ್ ಅಡ್ವಾನ್ಸ್ಡ್ | 44 | 100-00 |
| 45 | ಇನ್ಶೂರೆನ್ಸ್ ಹೈಯರ್ | 45 | 100-00 |
| 46 | ಇನ್ಶೂರೆನ್ಸ್ ಲೋಯರ್ | 46 | 100-00 |
| 47 | ಕನ್ನಡ ಭಾಷೆ, | 47 | 100-00 |
| 48 | ಫುಡ್ ಅಂಡ್ ಸಿವಿಲ್ ಸಪ್ಲೈಸ್ ಎಕ್ಸಾಮಿನೇಷನ್ | 48 | 100-00 |
| 49 | ಕರ್ನಾಟಕ ಕನ್ಸ್ಯೂಮರ್ ಪ್ರೊಟೆಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ಟ್ ಫೋರಮ್ ಸರ್ವೀಸ್ ಎಕ್ಸಾಮಿನೇಷನ್ | 49 | 100-00 |
| 50 | ಇಂಡಿಯನ್ ಕಾಂಟ್ರಕ್ಟ್ ಆಕ್ಟ್ | 51 | 50-00 |
| 51 | ಕೆ.ಪಿ.ಎಸ್.ಸಿ. ಮ್ಯಾನ್ಯುಯಲ್ | 52 | 50-00 |
| 52 | ಕೆ.ಪಿ.ಎಸ್.ಸಿ. ರಿಕ್ರೂಟ್‌ಮೆಂಟ್ ರೂಲ್ಸ್ | 53 | 50-00 |
| 53 | ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ-1 | 54 | 100-00 |
| 54 | ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ-2 | 55 | 50-00 |
| 55 | ಸ್ಪೆಷಲ್ ಲಾಸ್ ಅಂಡ್ ಸರ್ವೀಸ್ ರೂಲ್ಸ್ | 56 | 50-00 |
| 56 | ಟ್ರಾನ್ಸ್‌ಲೇಷನ್ ಟೆಸ್ಟ್ | 58 | 50-00 |
| 57 | ಎಸ್.ಎ.ಎಸ್. ಭಾಗ-1 | 61 | 100-00 |
| 58 | ಎಸ್.ಎ.ಎಸ್. ಭಾಗ-2 | 62 | 100-00 |
| 59 | ಎಸ್.ಎ.ಎಸ್. ಭಾಗ-3 | 63 | 100-00 |
| 60 | ಟ್ರೆಜರಿ ಅಕೌಂಟ್ಸ್ ಭಾಗ-1 | 64 | 100-00 |
| 61 | ಟ್ರೆಜರಿ ಅಕೌಂಟ್ಸ್ ಭಾಗ-2 | 65 | 100-00 |
| 62 | ಎಲೆಕ್ಟ್ರಿಸಿಟಿ ಲಾಸ್ ಎಕ್ಸಾಮಿನೇಷನ್ | 66 | 100-00 |
| 63 | ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಹೈಯರ್) ಎಕ್ಸಾಮಿನೇಷನ್ ಭಾಗ-1 | 67 | 50-00 |
| 64 | ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಹೈಯರ್) ಎಕ್ಸಾಮಿನೇಷನ್ ಭಾಗ-2 | 68 | 50-00 |
| 65 | ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಲೋಯರ್) ಎಕ್ಸಾಮಿನೇಷನ್ | 70 | 50-00 |
| 66 | ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್ ಎಕ್ಸಾಮಿನೇಷನ್ | 71 | 50-00 |
| 67 | ಕನ್ನಡ ಭಾಷೆ (ಐ.ಎ.ಎಸ್, ಐ.ಪಿ.ಎಸ್ ಮತ್ತು ಐ.ಎಫ್.ಎಸ್ ಅಧಿಕಾರಿಗಳಿಗೆ ಮಾತ್ರ) | 72 | 100-00 |

| | | | |
|---|---|---|---|
| 68 | ಕನ್ನಡ ಭಾಷಾ ಮೌಖಿಕ ಪರೀಕ್ಷೆ ಮಾತ್ರ (ಅನುಬಂಧ-10ನ್ನು ಗಮನಿಸುವುದು) | 73 | 50-00 |
| 69 | ವಿಕಲ ಚೇತನರು ಮತ್ತು ಹಿರಿಯ ನಾಗರೀಕರಿಗೆ ಸಂಬಂಧಿಸಿದ ಅಧಿನಿಯಮ ಮತ್ತು ನಿಯಮಗಳು | 74 | 50-00 |
| 70 | ಅಗ್ನಿಶಾಮಕ ಅಧಿನಿಯಮ 1964, ನಿಯಮಗಳು ಮತ್ತು ಕೈಪಿಡಿ | 75 | 50-00 |

*****

## ಅನುಬಂಧ-5

**ಇಲಾಖಾ ಪರೀಕ್ಷೆಗಳನ್ನು ಮೂರು ಹಂತಗಳಲ್ಲಿ ನಡೆಸಲಾಗುವುದು:-**

ಅ) ಪ್ರಥಮ ಹಂತವಾಗಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಡೆಸಲಾಗುವುದು.

ಆ) ದ್ವಿತೀಯ ಹಂತವಾಗಿ ಬೆಂಗಳೂರು, ಮೈಸೂರು, ಶಿವಮೊಗ್ಗ, ಬೆಳಗಾವಿ, ಕಲಬುರಗಿ ವಿಭಾಗೀಯ ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುವುದು.

ಇ) ತೃತೀಯ ಹಾಗೂ ಅಂತಿಮ ಹಂತವಾಗಿ ಬೆಂಗಳೂರು ಕೇಂದ್ರದಲ್ಲಿ ಮಾತ್ರ ನಡೆಸಲಾಗುವುದು.

ಇಲಾಖಾ ಪರೀಕ್ಷೆಗಳನ್ನು ನಡೆಸಲಾಗುವ ಜಿಲ್ಲಾ ಪರೀಕ್ಷಾ ಕೇಂದ್ರಗಳು ಮತ್ತು ಅವುಗಳ ಸಂಕೇತ ಸಂಖ್ಯೆಗಳು ಈ ಕೆಳಗಿನಂತಿವೆ.

**ಅ) ಪ್ರಥಮ ಹಂತದಲ್ಲಿ ನಡೆಯುವ ಪರೀಕ್ಷಾ ಕೇಂದ್ರಗಳು:-**

| ಜಿಲ್ಲಾ ಕೇಂದ್ರದ ಹೆಸರು | ಜಿಲ್ಲಾ ಕೇಂದ್ರದ ಸಂಕೇತ | ಜಿಲ್ಲಾ ಕೇಂದ್ರದ ಹೆಸರು | ಜಿಲ್ಲಾ ಕೇಂದ್ರದ ಸಂಕೇತ | ಜಿಲ್ಲಾ ಕೇಂದ್ರದ ಹೆಸರು | ಜಿಲ್ಲಾ ಕೇಂದ್ರದ ಸಂಕೇತ |
|---|---|---|---|---|---|
| ಬೆಂಗಳೂರು | 01 | ಗದಗ | 12 | ರಾಮನಗರ | 23 |
| ಬೆಳಗಾವಿ | 02 | ಹಾಸನ | 13 | ರಾಯಚೂರು | 24 |
| ಬಳ್ಳಾರಿ | 03 | ಹಾವೇರಿ | 14 | ಶಿವಮೊಗ್ಗ | 25 |
| ಬೀದರ್ | 04 | ಕಲಬುರಗಿ | 15 | ತುಮಕೂರು | 26 |
| ಬಾಗಲಕೋಟೆ | 05 | ಕಾರವಾರ | 16 | ಉಡುಪಿ | 27 |
| ಚಾಮರಾಜನಗರ | 06 | ಕೋಲಾರ | 17 | ವಿಜಯಪುರ | 28 |
| ಚಿಕ್ಕಬಳ್ಳಾಪುರ | 07 | ಕೊಪ್ಪಳ | 18 | ಯಾದಗಿರಿ | 29 |
| ಚಿಕ್ಕಮಗಳೂರು | 08 | ಮಂಡ್ಯ | 19 | ವಿಜಯನಗರ (ಹೊಸಪೇಟೆ) | 30 |
| ಚಿತ್ರದುರ್ಗ | 09 | ಮಂಗಳೂರು | 20 | | |
| ಧಾರವಾಡ | 10 | ಮಡಿಕೇರಿ | 21 | | |
| ದಾವಣಗೆರೆ | 11 | ಮೈಸೂರು | 22 | | |

ಆ) <u>ದ್ವಿತೀಯ ಹಂತದಲ್ಲಿ ನಡೆಯುವ ವಿಭಾಗೀಯ ಪರೀಕ್ಷಾ ಕೇಂದ್ರಗಳು ಹಾಗೂ ಅವಲಂಬಿತ ಇತರ ಜಿಲ್ಲಾ ಕೇಂದ್ರಗಳ</u>

<u>ವಿವರಗಳು:-</u>

| ವಿಭಾಗೀಯ ಪರೀಕ್ಷಾ ಕೇಂದ್ರಗಳು | ಅವಲಂಬಿತ ಜಿಲ್ಲಾ ಕೇಂದ್ರಗಳು |
|---|---|
| ಬೆಂಗಳೂರು | ಬೆಂಗಳೂರು, ರಾಮನಗರ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ. |
| ಮೈಸೂರು | ಮೈಸೂರು, ಮಂಡ್ಯ, ಮಡಿಕೇರಿ, ಚಾಮರಾಜನಗರ, ಹಾಸನ |
| ಬೆಳಗಾವಿ | ಬೆಳಗಾವಿ, ವಿಜಯಪುರ, ಬಾಗಲಕೋಟೆ, ಧಾರವಾಡ, ಗದಗ, ಕಾರವಾರ, ಹಾವೇರಿ. |
| ಕಲಬುರಗಿ | ಕಲಬುರಗಿ, ಬೀದರ್, ಬಳ್ಳಾರಿ, ಕೊಪ್ಪಳ, ರಾಯಚೂರು, ಯಾದಗಿರಿ, ವಿಜಯನಗರ (ಹೊಸಪೇಟೆ) |
| ಶಿವಮೊಗ್ಗ | ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಮಂಗಳೂರು, ಉಡುಪಿ. |

ಇ) ತೃತೀಯ ಹಾಗೂ ಅಂತಿಮ ಹಂತದ ಪರೀಕ್ಷೆಗಳನ್ನು ಬೆಂಗಳೂರು ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುವುದು.

ಪ್ರಥಮ ಹಂತದ ಪರೀಕ್ಷೆಗಳು

(ದಿನಾಂಕ:09-05-2026 ರಿಂದ 11-05-2026 ರವರೆಗೆ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ)

| ಕ್ರ. ಸಂ | ವಾರ | ದಿನಾಂಕ | ವೇಳೆ | ವಿಷಯ/ವಿಷಯ ಸಂಕೇತ |
|---|---|---|---|---|
| 1 | 2 | 3 | 4 | 5 |
| 1 | ಶನಿವಾರ | 09-05-2026 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಅಕೌಂಟ್ಸ್ ಲೋಯರ್ (01) |
| | | | ಮಧ್ಯಾಹ್ನ 2.00 ರಿಂದ 4.00 ಗಂಟೆ | ಜನರಲ್ ಲಾ ಭಾಗ- II (08) |
| 2 | ಭಾನುವಾರ | 10-05-2026 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಅಕೌಂಟ್ಸ್ ಹೈಯರ್-ಪತ್ರಿಕೆ-1 (22/1) |
| | | | ಮಧ್ಯಾಹ್ನ 2.00 ರಿಂದ 4.00 ಗಂಟೆ | ಅಕೌಂಟ್ಸ್ ಹೈಯರ್-ಪತ್ರಿಕೆ-2 (22/2) |
| 3 | ಸೋಮವಾರ | 11-05-2026 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಜನರಲ್ ಲಾ ಭಾಗ- I ಪತ್ರಿಕೆ-1 (36/1) |
| | | | ಮಧ್ಯಾಹ್ನ 2.00 ರಿಂದ 4.00 ಗಂಟೆ | ಜನರಲ್ ಲಾ ಭಾಗ- I ಪತ್ರಿಕೆ-2 (36/2) |

## ದ್ವಿತೀಯ ಹಂತದ ಪರೀಕ್ಷೆಗಳು ವಿಭಾಗೀಯ ಕೇಂದ್ರಗಳಲ್ಲಿ

**(ದಿನಾಂಕ:13-05-2026 ರಿಂದ 22-05-2026 (ದಿ:17-05-2026 ಹೊರತುಪಡಿಸಿ) ರವರೆಗೆ**

**ಬೆಂಗಳೂರು, ಬೆಳಗಾವಿ, ಕಲಬುರಗಿ, ಮೈಸೂರು, ಶಿವಮೊಗ್ಗ)**

| ಕ್ರ. ಸಂ | ವಾರ | ದಿನಾಂಕ | ವೇಳೆ | ವಿಷಯ / ವಿಷಯ ಸಂಕೇತ |
|---|---|---|---|---|
| 1 | 2 | 3 | 4 | 5 |
| 1 | ಬುಧವಾರ | 13-05-2026 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಕನ್ನಡ ಭಾಷಾ ಪತ್ರಿಕೆ-1 (ಪುಸ್ತಕಗಳಿಲ್ಲದೆ) (47/1) |
| | | | ಮಧ್ಯಾಹ್ನ 2.00 ರಿಂದ 3.00 ಗಂಟೆ | ಕನ್ನಡ ಭಾಷಾ ಪತ್ರಿಕೆ-2 (ಪುಸ್ತಕಗಳಿಲ್ಲದೆ)(47/2) |
| 2 | ಗುರುವಾರ | 14-05-2026 | ಬೆಳಿಗ್ಗೆ 9.00 ರಿಂದ 12.00 ಗಂಟೆ | ಇನ್ಸೂರೆನ್ಸ್ ಹೈಯರ್ ಪತ್ರಿಕೆ-2 (ಪುಸ್ತಕಗಳಿಲ್ಲದೆ) (45/2) |
| | | | | ಪಿ.ಡಬ್ಲ್ಯೂ.ಡಿ ಹೈಯರ್ ಭಾಗ-I ಪತ್ರಿಕೆ-1, (ಪುಸ್ತಕಗಳಿಲ್ಲದೆ) (30/1) |
| | | | ಮಧ್ಯಾಹ್ನ 2.00 ರಿಂದ 5.00 ಗಂಟೆ | ಇನ್ಸೂರೆನ್ಸ್ ಲೋಯರ್ ಪತ್ರಿಕೆ-2 (ಪುಸ್ತಕಗಳಿಲ್ಲದೆ) (46/2) |
| | | | | ಪ್ರೆಸ್ ಮ್ಯಾನ್ಯುಯಲ್ ಹೈಯರ್ ಪತ್ರಿಕೆ-2 (28/2) |
| | | | ಮಧ್ಯಾಹ್ನ 2.00 ರಿಂದ 4.00 ಗಂಟೆ | ಪಿ.ಡಬ್ಲ್ಯೂ.ಡಿ ಹೈಯರ್ ಭಾಗ- I ಪತ್ರಿಕೆ-2, (30/2) |

| | | | | |
|---|---|---|---|---|
| 3 | ಶುಕ್ರವಾರ | 15-05-2026 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಲೇಬರ್ ಪತ್ರಿಕೆ-1 (26/1) |
| | | | | ಪ್ರಿಸನ್ಸ್ (14) |
| | | | | ಎಕ್ಸೈಸ್ (20) |
| | | | | ಮೋಟಾರ್ ವೆಹಿಕಲ್ಸ್ (11) |
| | | | | ರೆವಿನ್ಯೂ ಹೈಯರ್ ಭಾಗ-I ಪತ್ರಿಕೆ-1 (39/1) |
| | | | | ಇನ್ಸೂರೆನ್ಸ್ ಅಡ್ವಾನ್ಸ್ಡ್ ಪತ್ರಿಕೆ-1 (44/1) |
| | | | ಮಧ್ಯಾಹ್ನ 2.00 ರಿಂದ 4.00 ಗಂಟೆ | ಲೇಬರ್ ಪತ್ರಿಕೆ-2 (26/2) |
| | | | | ರೆವಿನ್ಯೂ ಹೈಯರ್ ಭಾಗ-I ಪತ್ರಿಕೆ-2 (39/2) |
| | | | | ಇನ್ಸೂರೆನ್ಸ್ ಅಡ್ವಾನ್ಸ್ಡ್ ಪತ್ರಿಕೆ-2 (44/2) |
| 4 | ಶನಿವಾರ | 16-05-2026 | ಬೆಳಿಗ್ಗೆ 10.00 ರಿಂದ 12.00 ಗಂಟೆ | ರೆವಿನ್ಯೂ ಹೈಯರ್ ಭಾಗ- II ಪತ್ರಿಕೆ-I (40/1) |
| | | | | ರಿಜಿಸ್ಟ್ರೇಷನ್ ಪತ್ರಿಕೆ-1 (33/1) |
| | | | | ಕಮರ್ಷಿಯಲ್ ಟ್ಯಾಕ್ಸ್‌ಸ್ ಭಾಗ- I ಪತ್ರಿಕೆ-1 (42/1) |
| | | | | ಇನ್ಸೂರೆನ್ಸ್ ಅಡ್ವಾನ್ಸ್ಡ್ ಪತ್ರಿಕೆ-3 (44/3) |
| | | | | ಪೊಲೀಸ್ ಮ್ಯಾನ್ಯುಯಲ್ (21) |
| | | | ಮಧ್ಯಾಹ್ನ 2.00 ರಿಂದ 4.00 ಗಂಟೆ | ರೆವಿನ್ಯೂ ಹೈಯರ್ ಭಾಗ- II ಪತ್ರಿಕೆ-2 (40/2) |
| | | | | ರಿಜಿಸ್ಟ್ರೇಷನ್ ಪತ್ರಿಕೆ-2 (33/2) |
| | | | | ಕಮರ್ಷಿಯಲ್ ಟ್ಯಾಕ್ಸ್‌ಸ್ ಭಾಗ-I, ಪತ್ರಿಕೆ-2 (42/2) |
| | | | | ಯೂಥ್ ಸರ್ವೀಸಸ್ ಮ್ಯಾನ್ಯುಯಲ್ (19) |
| 5 | ಸೋಮವಾರ | 18-05-2026 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಕೋ-ಆಪರೇಷನ್ ಪತ್ರಿಕೆ-1 (35/1) |
| | | | | ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್ (04) |
| | | | | ಮಾರ್ಕೆಟಿಂಗ್ ಪತ್ರಿಕೆ-1 (38/1) |
| | | | | ಮೈನಿಂಗ್ ಭಾಗ- I (12) |
| | | | | ರೆವಿನ್ಯೂ ಲೋಯರ್ ಪತ್ರಿಕೆ-1 (41/1) |
| | | | | ಇನ್ಸೂರೆನ್ಸ್ ಹೈಯರ್ ಪತ್ರಿಕೆ-1(45/1) |

| | | | | |
|---|---|---|---|---|
| | | | | ಕಮರ್ಷಿಯಲ್ ಟ್ಯಾಕ್ಸ್‌ಸ್ ಭಾಗ-I, ಪತ್ರಿಕೆ-3 (42/3)<br>ಮತ್ತು ಕೋ-ಆಪರೇಷನ್ ಪತ್ರಿಕೆ-2 (35/2)<br>(ಎರಡಕ್ಕೂ ಒಂದೇ ಪ್ರಶ್ನೆ ಪತ್ರಿಕೆ) |
| | | | ಮಧ್ಯಾಹ್ನ 2.00 ರಿಂದ 4.00 ಗಂಟೆ | ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್<br>ಲೋಯರ್ (05) |
| | | | | ಮಾರ್ಕೆಟಿಂಗ್ ಪತ್ರಿಕೆ-2 (38/2) |
| | | | | ಮೈನಿಂಗ್ ಭಾಗ- II (13) |
| | | | | ರೆವಿನ್ಯೂ ಲೋಯರ್ ಪತ್ರಿಕೆ-2 (41/2) |
| | | | | ಇನ್ಶೂರೆನ್ಸ್ ಹೈಯರ್ ಪತ್ರಿಕೆ-3 (45/3) |
| 6 | ಮಂಗಳವಾರ | 19-05-2026 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಸಿರಿಕಲ್ಚರ್ ಪತ್ರಿಕೆ-1 (34/1) |
| | | | | ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ-I (02) |
| | | | | ಕಮರ್ಷಿಯಲ್ ಟ್ಯಾಕ್ಸ್‌ಸ್ ಭಾಗ-II ಪತ್ರಿಕೆ-1 (23/1) |
| | | | | ಪ್ರೆಸ್ ಮ್ಯಾನ್ಯುಯಲ್ ಹೈಯರ್<br>ಪತ್ರಿಕೆ-1 (28/1) |
| | | | | ಲೋಕಲ್ ಲಾಸ್ ಅಂಡ್ ಕಮರ್ಷಿಯಲ್ ಬುಕ್ ಕೀಪಿಂಗ್ ಪತ್ರಿಕೆ-1 (27/1) |
| | | | | ಪೋರ್ಟ್ಸ್ ಹೈಯರ್ (15) |
| | | | | ಇನ್ಶೂರೆನ್ಸ್ ಲೋಯರ್ ಪತ್ರಿಕೆ-1 (46/1) |
| | | | ಮಧ್ಯಾಹ್ನ 2.00 ರಿಂದ 4.00 ಗಂಟೆ | ಸಿರಿಕಲ್ಚರ್ ಪತ್ರಿಕೆ-2 (34/2) |
| | | | | ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ-II (03) |
| | | | | ಕಮರ್ಷಿಯಲ್ ಟ್ಯಾಕ್ಸ್‌ಸ್ ಭಾಗ-II ಪತ್ರಿಕೆ-2 (23/2) |
| | | | | ಲೋಕಲ್ ಲಾಸ್ ಅಂಡ್ ಕಮರ್ಷಿಯಲ್ |

| | | | | |
|---|---|---|---|---|
| | | | | ಬುಕ್ ಕೀಪಿಂಗ್ ಪತ್ರಿಕೆ-2 (27/2) |
| | | | | ಪೋರ್ಟ್ಸ್ ಲೋಯರ್ (16) |
| | | | | ಇನ್ಶೂರೆನ್ಸ್ ಲೋಯರ್ ಪತ್ರಿಕೆ-3 (46/3) |
| 7 | ಬುಧವಾರ | 20-05-2026 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಲಾಸ್ ಪತ್ರಿಕೆ-1 (25/1) |
| | | | | ಪಿ.ಡಬ್ಲ್ಯೂ.ಡಿ ಹೈಯರ್ ಭಾಗ-II, ಪತ್ರಿಕೆ-1 (31/1) |
| | | | | ಪ್ರೆಸ್ ಮ್ಯಾನ್ಯುಯಲ್ ಲೋಯರ್ ಪತ್ರಿಕೆ-1 (29/1) |
| | | | | ಕೋ-ಆಪರೇಟಿವ್ ಆಡಿಟ್ ಎಕ್ಸಾಮಿನೇಷನ್ ಪತ್ರಿಕೆ-1 (43/1) |
| | | | | ಆಕ್ಟ್ಸ್ ಅಂಡ್ ರೂಲ್ಸ್ ರಿಲೇಟಿಂಗ್ ಟು ವಿಮೆನ್ ಅಂಡ್ ಚೈಲ್ಡ್ ಡೆವೆಲಪ್‌ಮೆಂಟ್(10) |
| | | | | ರೆವಿನ್ಯೂ ಲೋಯರ್ ಪತ್ರಿಕೆ-3 (41/3) |
| | | | ಮಧ್ಯಾಹ್ನ 2.00 ರಿಂದ 4.00 ಗಂಟೆ | ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಲಾಸ್ ಪತ್ರಿಕೆ-2 (25/2) |
| | | | | ಪಿ.ಡಬ್ಲ್ಯೂ.ಡಿ ಹೈಯರ್ ಭಾಗ-II, ಪತ್ರಿಕೆ-2 (31/2) |
| | | | | ಪ್ರೆಸ್ ಮ್ಯಾನ್ಯುಯಲ್ ಲೋಯರ್ ಪತ್ರಿಕೆ-2 (29/2) |
| | | | | ಕೋ-ಆಪರೇಟಿವ್ ಆಡಿಟ್ ಎಕ್ಸಾಮಿನೇಷನ್ ಪತ್ರಿಕೆ-2 (43/2) |
| 8 | ಗುರುವಾರ | 21-05-2026 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಪಿ.ಡಬ್ಲ್ಯೂ.ಡಿ. ಲೋಯರ್ ಪತ್ರಿಕೆ-1 (32/1) |
| | | | | ಸೋಶಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಅಂಡ್ ಕ್ಲಾಸಿಫಿಕೇಶನ್ ರಿಜರ್ವೇಶನ್ ಫಾರ್ ಬ್ಯಾಕ್‌ವರ್ಡ್ ಕ್ಲಾಸಸ್ ಭಾಗ-I (17) |
| | | | | ಕೋ-ಆಪರೇಟಿವ್ ಆಡಿಟ್ ಎಕ್ಸಾಮಿನೇಷನ್ ಪತ್ರಿಕೆ-3 (43/3) |

| | | | | |
|---|---|---|---|---|
| | | | | ಫುಡ್ ಅಂಡ್ ಸಿವಿಲ್ ಸಪ್ಲೈಸ್ ಪತ್ರಿಕೆ-1 (48/1) |
| | | | ಮಧ್ಯಾಹ್ನ 2.00 ರಿಂದ 4.00 ಗಂಟೆ | ಪಿ.ಡಬ್ಲ್ಯೂ.ಡಿ. ಲೋಯರ್ ಪತ್ರಿಕೆ-2 (32/2) |
| | | | | ಸೋಶಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಅಂಡ್ ಕ್ಲಾಸಿಫಿಕೇಶನ್ ರಿಜರ್‌ವೇಶನ್ ಫಾರ್ ಬ್ಯಾಕ್‌ವರ್ಡ್ ಕ್ಲಾಸಸ್ ಭಾಗ-II (18) |
| | | | | ಫುಡ್ ಅಂಡ್ ಸಿವಿಲ್ ಸಪ್ಲೈಸ್ ಪತ್ರಿಕೆ-2 (48/2) |
| | | | | ಹೋಂ ಗಾರ್ಡ್ಸ್ ಮ್ಯಾನ್ಯುಯಲ್ (09) |

| | | | | |
|---|---|---|---|---|
| 9 | ಶುಕ್ರವಾರ | 22-05-2026 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ ಪತ್ರಿಕೆ-1 (37/1) |
| | | | | ಕರ್ನಾಟಕ ಕನ್ಸ್ಯೂಮರ್ ಪ್ರೊಟೆಕ್ಷನ್ಸ್, ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ಟ್ ಫೋರಮ್ ಸರ್ವಿಸ್ ಎಕ್ಸಾಮಿನೇಷನ್, ಪತ್ರಿಕೆ-1 (49/1) |
| | | | | ವಿಕಲಚೇತನರು ಮತ್ತು ಹಿರಿಯ ನಾಗರೀಕರಿಗೆ ಸಂಬಂಧಿಸಿದ ಅಧಿನಿಯಮ ಮತ್ತು ನಿಯಮಗಳು (74) |
| | | | | ಫಾರೆಸ್ಟ್ ಪತ್ರಿಕೆ-1 (24/1) ಮತ್ತು ಫಾರೆಸ್ಟ್ ಪತ್ರಿಕೆ-1 (ಫಾರೆಸ್ಟ್ ಗಾರ್ಡ್‌ಗಳಿಗೆ ಮಾತ್ರ) (06) |
| | | | | ಅಗ್ನಿಶಾಮಕ ಅಧಿನಿಯಮ 1964, ನಿಯಮಗಳು ಮತ್ತು ಕೈಪಿಡಿ (75) |
| | | | ಮಧ್ಯಾಹ್ನ 2.00 ರಿಂದ 4.00ಗಂಟೆ | ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ ಪತ್ರಿಕೆ-2 (37/2) |
| | | | | ಕರ್ನಾಟಕ ಕನ್ಸ್ಯೂಮರ್ ಪ್ರೊಟೆಕ್ಷನ್ಸ್, ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ಟ್ ಫೋರಮ್ ಸರ್ವಿಸ್ ಎಕ್ಸಾಮಿನೇಷನ್, ಪತ್ರಿಕೆ-2 (49/2) |
| | | | | ಫಾರೆಸ್ಟ್ ಪತ್ರಿಕೆ-2 (24/2) ಮತ್ತು ಫಾರೆಸ್ಟ್ ಪತ್ರಿಕೆ-2 (ಫಾರೆಸ್ಟ್ ಗಾರ್ಡ್‌ಗಳಿಗೆ ಮಾತ್ರ) (07) |

**ಬೆಂಗಳೂರು ಕೇಂದ್ರದಲ್ಲಿ ಮಾತ್ರ**

**ತೃತೀಯ ಹಂತದ ಪರೀಕ್ಷೆಗಳು**

**(ದಿನಾಂಕ:25-05-2026 ರಿಂದ 31-05-2026 (ದಿ:28-05-2026 ಹೊರತುಪಡಿಸಿ) ರವರೆಗೆ ಬೆಂಗಳೂರು ಕೇಂದ್ರದಲ್ಲಿ ಮಾತ್ರ)**

| ಕ್ರ. ಸಂ | ವಾರ | ದಿನಾಂಕ | ವೇಳೆ | ವಿಷಯ / ವಿಷಯ ಸಂಕೇತ |
|---|---|---|---|---|
| 1 | 2 | 3 | 4 | 5 |
| 1 | ಸೋಮವಾರ | 25-05-2026 | ಬೆಳಿಗ್ಗೆ 9.00 ರಿಂದ 12.00 ಗಂಟೆ | ಎಸ್.ಎ.ಎಸ್.ಭಾಗ-I, ಪತ್ರಿಕೆ-1 (61/1) ಮತ್ತು ಎಲೆಕ್ಟ್ರಿಸಿಟಿ ಆಡಿಟ್ ಅಂಡ್ ಅಕೌಂಟ್ಸ್ ಲಾಸ್ (ಹೈಯರ್) ಭಾಗ- II (68) (ಎರಡಕ್ಕೂ ಒಂದೇ ಪ್ರಶ್ನೆ ಪತ್ರಿಕೆ) (ಪುಸ್ತಕಗಳಿಲ್ಲದೆ) |
| | | | | ಟ್ರೆಜರಿ ಅಕೌಂಟ್ಸ್ ಭಾಗ-I ಪತ್ರಿಕೆ-1 (ಪುಸ್ತಕಗಳಿಲ್ಲದೆ) (64/1) |
| | | | | ಕನ್ನಡ ಪತ್ರಿಕೆ-1 (ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳಿಗೆ ಮಾತ್ರ) (ಪುಸ್ತಕಗಳಿಲ್ಲದೆ) (72/1) |
| | | | ಬೆಳಿಗ್ಗೆ 10.00 ರಿಂದ 12.00 ಗಂಟೆ | ಸ್ಪೆಷಲ್ ಲಾಸ್ ಅಂಡ್ ಸರ್ವೀಸ್ ರೂಲ್ಸ್ (56) |
| | | | | ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್ ಎಕ್ಸಾಮಿನೇಷನ್ (71) |
| | | | ಮಧ್ಯಾಹ್ನ 2.00 ರಿಂದ 4.00 ಗಂಟೆ | ಎಸ್.ಎ.ಎಸ್.ಭಾಗ-I ಪತ್ರಿಕೆ-2 (ಪುಸ್ತಕಗಳಿಲ್ಲದೆ) (61/2) |
| | | | | ಟ್ರೆಜರಿ ಅಕೌಂಟ್ಸ್ ಭಾಗ-I , ಪತ್ರಿಕೆ-2 (ಪುಸ್ತಕಗಳಿಲ್ಲದೆ) (64/2) |
| | | | ಮಧ್ಯಾಹ್ನ 2.00 ರಿಂದ 5.00 ಗಂಟೆ | ಸೆಕ್ರೆಟೇರಿಯಟ್ ಮ್ಯಾನುಯಲ್ ಭಾಗ- II (55) |
| | | | | ಟ್ರಾನ್ಸ್‌ಲೇಶನ್ ಟೆಸ್ಟ್ (ಪುಸ್ತಕಗಳಿಲ್ಲದೆ) (58) |
| | | | | ಕನ್ನಡ ಪತ್ರಿಕೆ-2 (ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳಿಗೆ ಮಾತ್ರ) (ಪುಸ್ತಕಗಳಿಲ್ಲದೆ) (72/2) |

| | | | | |
|---|---|---|---|---|
| 2 | ಮಂಗಳವಾರ | 26-05-2026 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಎಸ್.ಎ.ಎಸ್. ಭಾಗ- I ಪತ್ರಿಕೆ-3 (61/3) |
| | | | | ಟ್ರೆಜರಿ ಅಕೌಂಟ್ಸ್ ಭಾಗ- I ಪತ್ರಿಕೆ-3 (64/3) |
| | | | ಮಧ್ಯಾಹ್ನ 2.00 ರಿಂದ 4.00 ಗಂಟೆ | ಎಸ್.ಎ.ಎಸ್. ಭಾಗ- II ಪತ್ರಿಕೆ-1 (ಪುಸ್ತಕಗಳಿಲ್ಲದೆ) (62/1) |
| | | | | ಟ್ರೆಜರಿ ಅಕೌಂಟ್ಸ್ ಭಾಗ- II ಪತ್ರಿಕೆ-1 (ಎಲಿಮೆಂಟರಿ ಬುಕ್ ಕೀಪಿಂಗ್) (65/1) |
| 3 | ಬುಧವಾರ | 27-05-2026 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಎಸ್.ಎ.ಎಸ್.ಭಾಗ- II ಪತ್ರಿಕೆ-2 (62/2) |
| | | | | ಎಲೆಕ್ಟ್ರಿಸಿಟಿ ಲಾಸ್ ಪರೀಕ್ಷೆ ಪತ್ರಿಕೆ-1 (66/1) |
| | | | | ಟ್ರೆಜರಿ ಅಕೌಂಟ್ಸ್ ಭಾಗ- II ಪತ್ರಿಕೆ-2 (65/2) (ಪುಸ್ತಕಗಳಿಲ್ಲದೆ) |
| | | | ಮಧ್ಯಾಹ್ನ 2.00 ರಿಂದ 4.00 ಗಂಟೆ | ಎಲೆಕ್ಟ್ರಿಸಿಟಿ ಲಾಸ್ ಪರೀಕ್ಷೆ ಪತ್ರಿಕೆ-2 (66/2) |
| | | | | ಟ್ರೆಜರಿ ಅಕೌಂಟ್ಸ್ ಭಾಗ- II ಪತ್ರಿಕೆ-3 (65/3) |
| | | | ಮಧ್ಯಾಹ್ನ 2.00 ರಿಂದ 5.00ಗಂಟೆ | ಎಸ್.ಎ.ಎಸ್ ಭಾಗ- II ಪತ್ರಿಕೆ-3 (62/3) |
| 4 | ಶುಕ್ರವಾರ | 29-05-2026 | ಬೆಳಿಗ್ಗೆ 9.00 ರಿಂದ 12.00 ಗಂಟೆ | ಎಸ್.ಎ.ಎಸ್.ಭಾಗ- III ಪತ್ರಿಕೆ-1 (63/1) |
| | | | ಮಧ್ಯಾಹ್ನ 2.00 ರಿಂದ 4.00 ಗಂಟೆ | ಎಸ್.ಎ.ಎಸ್. ಭಾಗ- III ಪತ್ರಿಕೆ-2 (ಪುಸ್ತಕಗಳಿಲ್ಲದೆ) (63/2) |
| 5 | ಶನಿವಾರ | 30-05-2026 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಎಸ್.ಎ.ಎಸ್. ಭಾಗ-III ಪತ್ರಿಕೆ-3 (63/3) |
| | | | | ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ ಹೈಯರ್ ಪರೀಕ್ಷೆ ಭಾಗ- I (67) |
| | | | ಮಧ್ಯಾಹ್ನ 2.00 ರಿಂದ 4.00 ಗಂಟೆ | ಎಸ್.ಎ.ಎಸ್.ಭಾಗ-III ಪತ್ರಿಕೆ-4 (ಪುಸ್ತಕಗಳಿಲ್ಲದೆ) (63/4) |
| | | | | ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ ಲೋಯರ್ ಪರೀಕ್ಷೆ (70) |

| | | | | |
|---|---|---|---|---|
| 6 | ಭಾನುವಾರ | 31-05-2026 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ- I ಪತ್ರಿಕೆ-1 (54/1) |
| | | | | ಇಂಡಿಯನ್ ಕಾಂಟ್ರಾಕ್ಟ್ ಆಕ್ಟ್ (51) |
| | | | | ಕರ್ನಾಟಕ ಲೋಕಸೇವಾ ಆಯೋಗ ಮ್ಯಾನ್ಯುಯಲ್ (52) |
| | | | ಬೆಳಿಗ್ಗೆ 9.00 ರಿಂದ 12.00 ಗಂಟೆ | ಎಸ್.ಎ.ಎಸ್ ಭಾಗ- III ಪತ್ರಿಕೆ-5 (63/5) |
| | | | ಮಧ್ಯಾಹ್ನ 2.00 ರಿಂದ 4.00 ಗಂಟೆ | ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ- I ಪತ್ರಿಕೆ-2 ( 54/2) |
| | | | | ಕರ್ನಾಟಕ ಲೋಕಸೇವಾ ಆಯೋಗ ರಿಕ್ರೂಟ್‌ಮೆಂಟ್ ರೂಲ್ಸ್ (53) |

*****

## ಅನುಬಂಧ-6

**ಪಠ್ಯ ಕ್ರಮ:-**

(1) ಇಲಾಖಾ ಪರೀಕ್ಷೆಗಳಿಗೆ ಸಂಬಂಧಿಸಿದ ಪಠ್ಯ ಕ್ರಮಕ್ಕಾಗಿ ಅಭ್ಯರ್ಥಿಗಳು ಕರ್ನಾಟಕ ನಾಗರಿಕ ಸೇವೆಗಳು (ಸೇವೆ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974ರ ಷೆಡ್ಯೂಲ್-I ರಲ್ಲಿ ಮತ್ತು ಅದಕ್ಕೆ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗಿರುವ ತಿದ್ದುಪಡಿಗಳನ್ನು ನೋಡಬಹುದಾಗಿದೆ.

(2) ಪ್ರತಿ ವಿಷಯಗಳಲ್ಲಿನ ಪಠ್ಯಕ್ರಮದಲ್ಲಿರುವ (Syllabus) ಯಾವುದಾದರೂ ನಿಯಮಗಳು/ ಅಧಿನಿಯಮಗಳು ನಿರಸನಗೊಂಡಿದ್ದಲ್ಲಿ (Repealed) ಅವುಗಳನ್ನು ಕೈಬಿಟ್ಟು ಹೊಸದಾಗಿ ಸೇರ್ಪಡೆಯಾಗಿರುವ ಹಾಗೂ ಇಲಾಖೆಗಳಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮ/ ಅಧಿನಿಯಮಗಳನ್ವಯ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿ ಪರೀಕ್ಷೆಗಳನ್ನು ನಡೆಸಲಾಗುವುದೆಂದು ಅಭ್ಯರ್ಥಿಗಳ ಗಮನಕ್ಕೆ ತರಲಾಗಿದೆ.

**ಕನ್ನಡ ಭಾಷಾ ವಿಷಯದ ಪಠ್ಯ ಕ್ರಮ:-**

**(1) ವಿಷಯ ಸಂಕೇತ-72:-** ಅಖಿಲ ಭಾರತ ಸೇವಾ ಅಧಿಕಾರಿ (ಐ.ಎ.ಎಸ್/ಐ.ಪಿ.ಎಸ್/ ಐ.ಎಫ್.ಎಸ್) ಅಭ್ಯರ್ಥಿಗಳು ತೇರ್ಗಡೆಯಾಗಬೇಕಾಗಿರುವ ಕನ್ನಡ ಭಾಷಾ ಇಲಾಖಾ ಪರೀಕ್ಷೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 168 ಎಸ್‌ಎಂಇ 94, ದಿನಾಂಕ:12.07.1995ರ ಪ್ರಕಾರ 10ನೇ ತರಗತಿಯ ಕನ್ನಡ ದ್ವಿತೀಯ ಮತ್ತು ತೃತೀಯ ಭಾಷಾ ಪುಸ್ತಕ `` **ತಿಳಿಗನ್ನಡ-6** " ಎಂಬ ಪುಸ್ತಕವನ್ನು ನಿಗದಿಪಡಿಸಿದೆ.

**(2) ವಿಷಯ ಸಂಕೇತ-47:-** ಅಖಿಲ ಭಾರತ ಸೇವಾ ಅಧಿಕಾರಿಗಳನ್ನು ಹೊರತುಪಡಿಸಿ ಇತರೆ ಅಭ್ಯರ್ಥಿಗಳಿಗೆ ನಡೆಯುವ ಕನ್ನಡ ಭಾಷಾ ಇಲಾಖಾ ಪರೀಕ್ಷೆಗೆ.

**ಅ)** ಕರ್ನಾಟಕ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು ಇವರಿಂದ ಪ್ರಕಾಶನಗೊಂಡಿರುವ ವಿವಿಧ ಲೇಖಕರಿಂದ ರಚಿತವಾದ **``ಸತ್ಯಕ್ಕೆ ಬೆಲೆಕೊಟ್ಟ ಗೆಳೆಯರು"** ಎಂಬ ಪಾಠದಿಂದ ಪ್ರಾರಂಭಗೊಳ್ಳುವ **``ಸಣ್ಣ ಕಥೆಗಳು"** ಪುಸ್ತಕವನ್ನು

**ಮತ್ತು**

**ಆ)** ಆರನೆಯ ತರಗತಿಯ ಪಠ್ಯಪುಸ್ತಕ **`` ಸಿರಿಗನ್ನಡ "** ವನ್ನು ನಿಗದಿಪಡಿಸಲಾಗಿದೆ.

<u>**ಪಠ್ಯಪುಸ್ತಕಗಳು:-**</u>

ಅ) ಪಠ್ಯಪುಸ್ತಕಗಳನ್ನು ಉಪಯೋಗಿಸಿ ಪರೀಕ್ಷೆ ಬರೆಯಬಹುದಾದ ಪತ್ರಿಕೆಗಳಿಗೆ ಅಭ್ಯರ್ಥಿಗಳು ಸರ್ಕಾರದಿಂದ ಪ್ರಕಾಶಿಸಲ್ಪಟ್ಟ ಪಠ್ಯಪುಸ್ತಕಗಳನ್ನು ಉಪಯೋಗಿಸಬಹುದು ಮತ್ತು ಖಾಸಗಿ ಪ್ರಕಾಶಕರಿಂದ ಪ್ರಕಾಶಿಸಲ್ಪಟ್ಟ ಪುಸ್ತಕಗಳನ್ನು ಸರ್ಕಾರಿ ಪ್ರಕಾಶಿತ ಪುಸ್ತಕಗಳ ಮಾದರಿಗೆ ಯಾವುದೇ ರೀತಿಯ ತದ್ವಿರುದ್ಧವಾಗಿಲ್ಲದಿದ್ದರೆ ಅಂತಹ ಪಠ್ಯ ಪುಸ್ತಕಗಳನ್ನು ಮಾತ್ರ ಪರೀಕ್ಷಾ ಉಪಕೇಂದ್ರಗಳಲ್ಲಿ ಉಪಯೋಗಿಸಬಹುದಾಗಿರುತ್ತದೆ. <u>ಯಾವುದೇ ಖಾಸಗಿ ಪ್ರಕಾಶಕರು ಸಿದ್ಧಪಡಿಸಿ ಪ್ರಕಟಿಸಲಾದ ಗೈಡ್‌ಗಳನ್ನು ನಿಷೇಧಿಸಲಾಗಿದೆ.</u>

ಆ) ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್ ಮತ್ತು ಲೋಯರ್ ವಿಷಯಗಳ ಪರೀಕ್ಷೆಯಲ್ಲಿ ``ಉದ್ಯೋಗ ಮತ್ತು ತರಬೇತಿ ಮಹಾನಿರ್ದೇಶನಾಲಯ, ನವದೆಹಲಿ" ಇವರು ಪ್ರಕಟಿಸಿರುವ <u>**``ಎಂಪ್ಲಾಯ್‌ಮೆಂಟ್ ಸರ್ವೀಸ್ ಮ್ಯಾನ್ಯುಯಲ್"**</u> ಪುಸ್ತಕವನ್ನು ಉಪಯೋಗಿಸಲು ಅನುಮತಿ ನೀಡಲಾಗಿದೆ.

*****

<u>**ಅನುಬಂಧ-7**</u>

<u>**ವಿನಾಯಿತಿಯ ವಿವರಗಳನ್ನು ಅರ್ಜಿಗಳಲ್ಲಿ ನಮೂದಿಸುವ ಬಗ್ಗೆ:-**</u>

ನಿಯಮಾನುಸಾರ ಹಿಂದಿನ ಎರಡು ವರ್ಷಗಳ ಅವಧಿಯಲ್ಲಿ ಇಲಾಖಾ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ಗಳಿಸಿರುವ ಅಂಕಗಳ ಆಧಾರದ ಮೇರೆಗೆ ಹಾಗೂ ಅಭ್ಯರ್ಥಿಗಳು ಹೊಂದಿರುವ ಶೈಕ್ಷಣಿಕ ವಿದ್ಯಾರ್ಹತೆ ಮೇರೆಗೆ ಕೆಲವು ವಿಷಯಗಳಿಗೆ/ಪತ್ರಿಕೆಗಳಿಗೆ ವಿನಾಯಿತಿಯನ್ನು ನೀಡಲು ಅವಕಾಶವಿದೆ. ವಿವರಗಳು ಕೆಳಗಿನಂತಿವೆ:

<u>**I).ಹಿಂದಿನ ಅಧಿವೇಶನಗಳ ಇಲಾಖಾ ಪರೀಕ್ಷೆಗಳಲ್ಲಿ ಕೆಲವು ವಿಷಯಗಳಲ್ಲಿ/ಪತ್ರಿಕೆಗಳಲ್ಲಿ ಪಡೆದ ವಿನಾಯಿತಿ:**</u>

**ಅ)** ಯಾವುದೇ ವಿಷಯವು ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನೊಳಗೊಂಡಿದ್ದಲ್ಲಿ ಅಭ್ಯರ್ಥಿಯು ಅದೇ ವಿಷಯದ ಯಾವುದಾದರೂ ಪತ್ರಿಕೆ/ಪತ್ರಿಕೆಗಳಲ್ಲಿ ನಿರ್ದಿಷ್ಟಪಡಿಸಲಾದ ಗರಿಷ್ಟ ಅಂಕಗಳಲ್ಲಿ ಶೇಕಡಾ 60ಕ್ಕಿಂತ ಕಡಿಮೆ ಇರದಷ್ಟು ಅಂಕಗಳನ್ನು ಗಳಿಸಿ ಉಳಿದ ಪತ್ರಿಕೆಯಲ್ಲಿ ಅನುತ್ತೀರ್ಣ ಅಂಕಗಳನ್ನು ಪಡೆದಿದ್ದಾಗ ಶೇ.60 ರಷ್ಟು ಅಂಕಗಳನ್ನು ಗಳಿಸಿರುವ ಪತ್ರಿಕೆಗಳಿಗೆ ವಿನಾಯಿತಿ ಹೊಂದಿರುವವರೆಂದು ಪರಿಗಣಿಸಲಾಗುವುದು. ಅಂತಹ ಅಭ್ಯರ್ಥಿಗಳು ಕರ್ನಾಟಕ ಲೋಕಸೇವಾ ಆಯೋಗ(ಸೇವಾ ಪರೀಕ್ಷೆಗಳ ನಡೆಸುವಿಕೆ) ನಿಯಮಗಳು, 1965ರ ನಿಯಮ 9ರ ಉಪ ನಿಯಮ (3)ರಲ್ಲಿನಂತೆ <u>**ಪರೀಕ್ಷೆಗಳ ಫಲಿತಾಂಶ ಘೋಷಿಸಿದ ದಿನಾಂಕದಿಂದ ಎರಡು ವರ್ಷಗಳೊಳಗೆ**</u> ಆ ಪರೀಕ್ಷೆಯ ಉಳಿದ ಪತ್ರಿಕೆ/ಪತ್ರಿಕೆಗಳಲ್ಲಿ ತೇರ್ಗಡೆಯಾಗಲು ಅವಶ್ಯವಿರುವಷ್ಟು (ಶೇ.35ರಷ್ಟು) ಅಂಕಗಳನ್ನು ಪಡೆದು ತೇರ್ಗಡೆಯಾಗತಕ್ಕದ್ದು. ಇಲ್ಲದಿದ್ದಲ್ಲಿ ಅಂತಹ <u>**ವಿನಾಯಿತಿಯು ಎರಡು ವರ್ಷದ ನಂತರ ರದ್ದಾಗುವುದು.**</u> ನಿಯಮದ ಉಧೃತ ಭಾಗ ಕೆಳಕಂಡಂತಿದೆ:-

"9(3) - Where an examination consists of more than one paper and a candidate secures in any paper not less than sixty percent of the maximum marks prescribed for that paper he shall be deemed to have passed the examination in that paper, if he passes the examination by securing the required number of passing marks in the other papers of the examination concerned <u>within two years from the date of declaration of the result</u> of the examination in which he had secured not less than sixty percent of the maximum marks in that paper."

ಆ) ಈ ರೀತಿ ಶೇಕಡ 60 ಹಾಗೂ ಅದಕ್ಕಿಂತಲೂ ಹೆಚ್ಚು ಅಂಕಗಳನ್ನು ಪಡೆದು ವಿನಾಯಿತಿ ಹೊಂದಿರುವಂತಹ ಅಭ್ಯರ್ಥಿಗಳು ಅವರು ವಿನಾಯಿತಿ ಪಡೆದ ವಿಷಯ, ವಿಷಯ ಸಂಕೇತ, ಪತ್ರಿಕೆ, ನೋಂದಣಿ ಸಂಖ್ಯೆ, ಅಧಿವೇಶನ/ವರ್ಷ ಮತ್ತು ಪರೀಕ್ಷಾ ಕೇಂದ್ರ ಇತ್ಯಾದಿ ವಿವರಗಳನ್ನು **ಆನ್‌ಲೈನ್ ಅರ್ಜಿಯಲ್ಲಿ ನಿಗದಿಪಡಿಸಿದ ಅಂಕಣದಲ್ಲಿ ಸ್ಪಷ್ಟವಾಗಿ ಮತ್ತು ಕಡ್ಡಾಯವಾಗಿ ನಮೂದಿಸಬೇಕು. ಅಭ್ಯರ್ಥಿಗಳು ಈ ರೀತಿ ವಿನಾಯಿತಿ ಹೊಂದಿದ ಪತ್ರಿಕೆ/ಪತ್ರಿಕೆಗಳಿಗೆ ಮಾತ್ರ ಗೈರು ಹಾಜರಾಗತಕ್ಕದ್ದು, ಈ ವಿಷಯದ ಉಳಿದ ಪತ್ರಿಕೆ/ಪತ್ರಿಕೆಗಳಲ್ಲಿ ಕನಿಷ್ಟ ಶೇ.35 ರಷ್ಟು ಉತ್ತೀರ್ಣತಾ ಅಂಕಗಳನ್ನು ಗಳಿಸಿದಲ್ಲಿ ಸದರಿ ವಿನಾಯಿತಿಯನ್ನು ಪ್ರಸಕ್ತ ಅಧಿವೇಶನದ ಫಲಿತಾಂಶವನ್ನು ಪ್ರಕಟಿಸುವ ಸಂದರ್ಭದಲ್ಲಿ ಪುರಸ್ಕರಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು.**

**ವಿಶೇಷ ಸೂಚನೆ: ಆನ್‌ಲೈನ್ ಅರ್ಜಿಯಲ್ಲಿ ವಿನಾಯಿತಿಯ ವಿವರಗಳನ್ನು ನಮೂದಿಸದಿದ್ದಲ್ಲಿ ಅಥವಾ ತಪ್ಪಾಗಿ ನಮೂದಿಸಿ ಆನಂತರ ಸರಿಯಾದ ಮಾಹಿತಿಗಳನ್ನು ನೀಡಿ ವಿನಾಯಿತಿಯನ್ನು ಪರಿಗಣಿಸಿ ಫಲಿತಾಂಶ ಪ್ರಕಟಿಸಬೇಕೆಂದು ಸಲ್ಲಿಸುವ ಮನವಿಯನ್ನು ಅಭ್ಯರ್ಥಿಗೆ ಯಾವುದೇ ಮುನ್ಸೂಚನೆ ಹಾಗೂ ಪತ್ರ ವ್ಯವಹಾರವಿಲ್ಲದೇ ತಿರಸ್ಕರಿಸಲಾಗುತ್ತದೆ. ಆದ ಕಾರಣ ಅಭ್ಯರ್ಥಿಗಳು ಈ ಬಗ್ಗೆ ಎಚ್ಚರವಹಿಸಬೇಕು.**

ಇ) ಹಿಂದಿನ ಅಧಿವೇಶನದ ಪರೀಕ್ಷೆಗಳಲ್ಲಿ ಕನ್ನಡ ಭಾಷಾ ವಿಷಯದ (ವಿಷಯ ಸಂಕೇತ-47 ಅಥವಾ 72) (ಪತ್ರಿಕೆ-1) ಮತ್ತು (ಪತ್ರಿಕೆ-2)ರ ಎರಡೂ ಪತ್ರಿಕೆಗಳ ಲಿಖಿತ ಪರೀಕ್ಷೆಯಲ್ಲಿ ಶೇ.60ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿ ವಿನಾಯಿತಿ ಪಡೆದಿದ್ದಲ್ಲಿ ಮೌಖಿಕ ಸಂದರ್ಶನಕ್ಕೆ ಹಾಜರಾಗಲು, ಅಭ್ಯರ್ಥಿಗಳು ಕಡ್ಡಾಯವಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು ಹಾಗೂ ಅರ್ಜಿಯಲ್ಲಿ ತಮಗೆ ಅನ್ವಯಿಸುವ ವಿಷಯ ಸಂಕೇತ 47 ಅಥವಾ 72 ಅನ್ನು ನಮೂದಿಸಿ, ಎರಡೂ ಪತ್ರಿಕೆಗಳಿಗೆ ವಿನಾಯತಿ ಹೊಂದಿರುವ ವಿವರಗಳನ್ನು ನಮೂದಿಸಬೇಕು ಹಾಗೂ ಪರೀಕ್ಷೆಯಲ್ಲಿ ಈ ಎರಡೂ ಪತ್ರಿಕೆಗಳಿಗೆ ಗೈರು ಹಾಜರಾಗತಕ್ಕದ್ದು. ಆಯೋಗವು ಕನ್ನಡ ಭಾಷಾ ವಿಷಯದ ಮೌಖಿಕ ಸಂದರ್ಶನಕ್ಕೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವ ಹಂತದಲ್ಲಿ ಈ ಎರಡೂ ಪತ್ರಿಕೆಗಳಲ್ಲಿ ವಿನಾಯಿತಿಯನ್ನು ಹೊಂದಿರುವ ಅಭ್ಯರ್ಥಿಗಳ ಅರ್ಜಿಯಲ್ಲಿನ ವಿನಾಯಿತಿಯನ್ನು ಪರಿಗಣಿಸಿ, ಮೌಖಿಕ ಸಂದರ್ಶನಕ್ಕೆ ಅರ್ಹತೆಗೆ ಪರಿಗಣಿಸಲಾಗುತ್ತದೆ.

ಈ) **ವಿಷಯ ಸಂಕೇತ-47 ಅಥವಾ 72ರಲ್ಲಿ ವಿನಾಯಿತಿ ಪಡೆದಿರುವಂತಹ ಅಭ್ಯರ್ಥಿಗಳು ಯಾವುದೇ ಕಾರಣಕ್ಕೂ ವಿಷಯ ಸಂಕೇತ-73 ವಿಷಯವನ್ನು ಆಯ್ಕೆ ಮಾಡಿಕೊಳ್ಳಬಾರದು.** ವಿನಾಯಿತಿ ಪಡೆದ ಬಗ್ಗೆ ವಿವರಗಳನ್ನು ಆನ್‌ಲೈನ್ ಅರ್ಜಿಯ ಸಂಬಂಧಿಸಿದ ಅಂಕಣದಲ್ಲಿ ಕಡ್ಡಾಯವಾಗಿ ನಮೂದಿಸಬೇಕು ಹಾಗೂ ನಿಗದಿತ ಪರೀಕ್ಷಾ ಶುಲ್ಕ `100/-ಗಳನ್ನು ಪಾವತಿಸಬೇಕು.

**ವಿಶೇಷ ಸೂಚನೆ:- ವಿನಾಯಿತಿ ಪಡೆದ ಪತ್ರಿಕೆಗಳ ವಿವರಗಳನ್ನು ಆನ್ ಲೈನ್ ಅರ್ಜಿಯಲ್ಲಿ ನಮೂದಿಸದಿದ್ದಲ್ಲಿ ವಿನಾಯಿತಿ ಕೋರಿಕೆಯನ್ನು ಪರಿಗಣಿಸುವುದಿಲ್ಲ.**

## II). ವಿದ್ಯಾರ್ಹತೆಗೆ ಸಂಬಂಧಪಟ್ಟಂತೆ ನೀಡಲಾಗುವ ವಿನಾಯಿತಿ: (Exemptions Regarding Qualifications):-

ಅಭ್ಯರ್ಥಿಗಳು ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಯಾವುದೇ ವಿಶ್ವವಿದ್ಯಾಲಯದ ಎಲ್.ಎಲ್.ಬಿ. ಅಥವಾ ಬಿ.ಎಲ್., ಹಾಗೂ ಬಿ.ಕಾಂ/ಬಿ.ಬಿ.ಎಂ/ ಐ.ಕಾಂ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪದವಿ ಹೊಂದಿದವರು ಈ ಕೆಳಕಂಡ ವಿಷಯಗಳ ಕೆಲವು ಪತ್ರಿಕೆಗಳಲ್ಲಿ ವಿನಾಯಿತಿ ಕೋರಬಹುದಾಗಿದೆ. **ಈ ರೀತಿ ವಿನಾಯಿತಿಯನ್ನು ಕೋರುವ ಅಭ್ಯರ್ಥಿಗಳು ಕಡ್ಡಾಯವಾಗಿ ಪದವಿಯ ಎಲ್ಲಾ ವರ್ಷಗಳ/ ಸೆಮಿಸ್ಟರ್‌ಗಳ ಸ್ವಯಂ ದೃಢೀಕರಿಸಿದ ಅಂಕಪಟ್ಟಿಗಳನ್ನು ಮತ್ತು ಘಟಿಕೋತ್ಸವ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಬೇಕು. ತಪ್ಪಿದಲ್ಲಿ ಅಥವಾ ನಂತರ ಸಲ್ಲಿಸುವ ದಾಖಲೆಗಳನ್ನು ಪರಿಗಣಿಸುವುದಿಲ್ಲ ಮತ್ತು ವಿನಾಯಿತಿಯನ್ನು ನೀಡುವುದಿಲ್ಲ.**

| Sl. No. | ಪದವಿ/Degree | Exemption in Subject and Paper/ ವಿನಾಯಿಗೆ ಪರಿಗಣಿಸುವ ವಿಷಯ/ಪತ್ರಿಕೆ |
|---|---|---|
| 1 | 2 | 3 |
| 1 | L. L. B / B. L. ಪದವಿ | General Law Part-I Paper-1 |
| 2 | Candidates who are Law Graduates of any recognised University are exempted from passing part II.<br><br>ಸೂಚನೆ:- ಕಾನೂನು ಪದವಿಯನ್ನು ಪಡೆದ ಅಭ್ಯರ್ಥಿಗಳು ತಮ್ಮ ಪದವಿಯ ಅಂಕಪಟ್ಟಿ ಮತ್ತು ಘಟಿಕೋತ್ಸವ ಪ್ರಮಾಣಪತ್ರವನ್ನು ಕರ್ತವ್ಯ ನಿರ್ವಹಿಸುತ್ತಿರುವ ಇಲಾಖೆಯ ಮುಖ್ಯಸ್ಥರಿಗೆ ಸಲ್ಲಿಸಿ ಜನರಲ್ ಲಾ ಭಾಗ-2ರ ವಿಷಯದ ಇಲಾಖಾ ಪರೀಕ್ಷೆಯಿಂದ ವಿನಾಯಿತಿಯನ್ನು ಪಡೆದುಕೊಳ್ಳತಕ್ಕದ್ದು. ಕಾನೂನು ಪದವಿಯನ್ನು ಪಡೆದ ಅಭ್ಯರ್ಥಿಗಳು ಜನರಲ್ ಲಾ ಭಾಗ-2ರ ವಿಷಯದ ಪರೀಕ್ಷೆಗಾಗಿ ಆಯೋಗಕ್ಕೆ ಅರ್ಜಿ ಸಲ್ಲಿಸುವ ಅಗತ್ಯತೆ ಇಲ್ಲ. | General Law Part-II |
| 3 | Candidates who have passed B.Com. Degree or I.Com. Examination of any recognised University or its equivalent with ``Advanced Accountancy'' as one of the subjects of the Study or the Karnataka Accounts Entrance for the Karnataka Government Technical Examination in Book-Keeping of the Senior Grade or G.D.A. Examination of the Bombay University +[or Diploma in Secretariat Practice examination conducted by the Board of Technical Education, Government of Karnataka.]<br><br>**ಸೂಚನೆ:-** ಸರ್ಕಾರದ ಪತ್ರ ಸಂಖ್ಯೆ:ಸಿಆಸುಇ 02 ಸೆಸೆನಿ 2001, ದಿನಾಂಕ:30/03/2001ರ ಅನ್ವಯ ಬಿ.ಕಾಂ. ಕೋರ್ಸಿನಲ್ಲಿ Financial Accountancy ವಿಷಯದಲ್ಲಿ ಪಾಸಾದವರನ್ನು Advanced Accountancy ವಿಷಯಕ್ಕೆ ಸಮಾನವಾಗಿದೆ ಎಂದು ಪರಿಗಣಿಸಿದೆ. | Co-Operation Paper-2 |

| | | |
|---|---|---|
| 4 | Candidates who have passed B.Com. Degree or I.Com. Examination of any recognised University or its equivalent with ``Advanced Accountancy '' as one of the subjects of the Study or the Karnataka Accounts Entrance of Karnataka Government Technical Examination in Book-Keeping of the Senior Grade or G.D.A. Examination of the Bombay University, are exempted from answering the paper in ``Book-Keeping'' and ``Accountancy''.<br>ಸೂಚನೆ:- ಸರ್ಕಾರದ ಪತ್ರ ಸಂಖ್ಯೆ:ಸಿಆಸು೯ 02 ಸೆಸೆನಿ 2001, ದಿನಾಂಕ:30/03/2001ರ ಅನ್ವಯ ಬಿ.ಕಾಂ. ಕೋರ್ಸಿನಲ್ಲಿ Financial Accountancy ವಿಷಯದಲ್ಲಿ ಪಾಸಾದವರನ್ನು Advanced Accountancy ವಿಷಯಕ್ಕೆ ಸಮಾನವಾಗಿದೆ ಎಂದು ಪರಿಗಣಿಸಿದೆ. | Commercial Tax<br>Higher Part-I Paper-3 |
| 5 | Government servants who are Commerce Graduates of any recognised University with ``Advanced Accountancy'' as one of the subjects, for the Degree course, are exempted from attending Paper -I of Part-III of SAS Examination.<br><br>**ಸೂಚನೆ:-** ಸರ್ಕಾರದ ಪತ್ರ ಸಂಖ್ಯೆ:ಸಿಆಸು೯ 02 ಸೆಸೆನಿ 2001, ದಿನಾಂಕ:30/03/2001ರ ಅನ್ವಯ ಬಿ.ಕಾಂ.ಕೋರ್ಸಿನಲ್ಲಿ Financial Accountancy ವಿಷಯದಲ್ಲಿ ಪಾಸಾದವರನ್ನು Advanced Accountancy ವಿಷಯಕ್ಕೆ ಸಮಾನವಾಗಿದೆ ಎಂದು ಪರಿಗಣಿಸಿದೆ. | S.A.S. Part-3, Paper-1 |

| | | |
|---|---|---|
| 6 | Government servants who are Commerce Graduate of a recognised University with``Advanced Accountancy'' as one of the subjects, in Degree course, are exempted from attending Paper- I of Part- II Treasury Accounts Examination.<br><br>**ಸೂಚನೆ:-** ಸರ್ಕಾರದ ಪತ್ರ ಸಂಖ್ಯೆ:ಸಿಆಸುಇ 02 ಸೆಸೆನಿ 2001, ದಿನಾಂಕ:30/03/2001ರ ಅನ್ವಯ ಬಿ.ಕಾಂ.ಕೋರ್ಸಿನಲ್ಲಿ Financial Accountancy ವಿಷಯದಲ್ಲಿ ಪಾಸಾದವರನ್ನು Advanced Accountancy ವಿಷಯಕ್ಕೆ ಸಮಾನವಾಗಿದೆ ಎಂದು ಪರಿಗಣಿಸಿದೆ. | Treasury Accounts Part-II Paper-1 |
| 7 | Candidates who have passed B.Com. Examination B.B.M. or Equivalent Degree Examination of any recognised University with Advance Accountancy as one of the subjects of study are exempted from attending the paper on Book-Keeping and Accountancy.<br><br>**ಸೂಚನೆ:-** ಸರ್ಕಾರದ ಪತ್ರ ಸಂಖ್ಯೆ:ಸಿಆಸುಇ 02 ಸೆಸೆನಿ 2001, ದಿನಾಂಕ:30/03/2001ರ ಅನ್ವಯ ಬಿ.ಕಾಂ.ಕೋರ್ಸಿನಲ್ಲಿ Financial Accountancy ವಿಷಯದಲ್ಲಿ ಪಾಸಾದವರನ್ನು Advanced Accountancy ವಿಷಯಕ್ಕೆ ಸಮಾನವಾಗಿದೆ ಎಂದು ಪರಿಗಣಿಸಿದೆ. | Co-Operative Audit Examination Paper-2 |

**ವಿಶೇಷ ಸೂಚನೆ:-** ವಿದ್ಯಾರ್ಹತೆ ವಿನಾಯಿತಿಗೆ ಸಂಬಂಧಿಸಿದಂತೆ, ಕರ್ನಾಟಕ ನಾಗರೀಕ ಸೇವೆಗಳ (ಸೇವೆ ಮತ್ತು ಕನ್ನಡ ಭಾಷಾ ಪರೀಕ್ಷೆ) ನಿಯಮ 1974ರ ಷೆಡ್ಯೂಲ್-1 ರಲ್ಲಿರುವ ಪಠ್ಯಕ್ರಮದ ಕೆಳಭಾಗದ ಟಿಪ್ಪಣಿಯಲ್ಲಿ ಹಾಗೂ ಸರ್ಕಾರದ ಪತ್ರ ಸಂಖ್ಯೆ:ಸಿಆಸುಇ 02 ಸೆಸೆನಿ 2001, ದಿನಾಂಕ:20-03-2001 ರನ್ವಯ ಬಿ.ಕಾಂ. ಕೋರ್ಸಿನಲ್ಲಿ Financial Accountancy ವಿಷಯದಲ್ಲಿ ಪಾಸಾದವರನ್ನು Advanced Accountancy ವಿಷಯಕ್ಕೆ ಸಮಾನವಾಗಿದೆ ಎಂದು ಪರಿಗಣಿಸಿದೆ.

ಆದರೆ ವಿಶ್ವವಿದ್ಯಾಲಯಗಳು ನೀಡಿರುವ ಅಭಿಪ್ರಾಯದಂತೆ 2024ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಬಿ.ಕಾಂ/ಐ.ಕಾಂ/ಬಿಬಿಎಂ ತತ್ಸಮಾನ ಪದವಿಯಲ್ಲಿ Financial Accountancy/Advanced Accountancy/Fanancial Accounting/Advanced Accounting and Auditing ವಿಷಯಗಳನ್ನು ತತ್ಸಮಾನ ಎಂದು ಪರಿಗಣಿಸಿ ಈ ಕೆಳಕಂಡ ವಿಷಯಗಳ ಕೆಲವು ಪತ್ರಿಕೆಗಳಿಗೆ ವಿನಾಯಿತಿಯನ್ನು ಪರಿಗಣಿಸಿದೆ.

{ TREASURY ACCOUNTS PART-II (65) PAPER-1, SAS PART-III (63) PAPER-1, CO-OPERATIVE AUDIT EXAMINATION (43) PAPER-2, COMMERICIAL TAX HIGHER PART-1 (42) PAPER-3, CO-OPERATION (35) PAPER-2}

ಅ)ಮೇಲ್ಕಂಡ ವಿದ್ಯಾರ್ಹತೆಗೆ ಸಂಬಂಧಿಸಿದ ವಿನಾಯಿತಿ ವಿವರಗಳನ್ನು ಆನ್‌ಲೈನ್ ಅರ್ಜಿಯಲ್ಲಿನ ಸಂಬಂಧಿಸಿದ ಅಂಕಣದಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು ಹಾಗೂ ವಿನಾಯಿತಿ ಕೋರಿರುವ ಅಭ್ಯರ್ಥಿಗಳು ತತ್ಸಂಬಂಧದ ವಿಷಯಗಳನ್ನು ಅಭ್ಯಸಿಸಿರುವ ಬಗ್ಗೆ ಎಲ್ಲಾ ವರ್ಷಗಳ ಸೆಮಿಸ್ಟರ್‌ಗಳ ಅಂಕಪಟ್ಟಿಗಳನ್ನು ಹಾಗೂ ಘಟಿಕೋತ್ಸವ ಪ್ರಮಾಣ ಪತ್ರವನ್ನು ತಮ್ಮ ಕಛೇರಿಯ **ಮುಖ್ಯಸ್ಥರಿಂದ (Head of Office) ದೃಢೀಕರಿಸಿ ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಸ್ಪಷ್ಟವಾಗಿ ಕಾಣುವಂತೆ ಅಪ್‌ಲೋಡ್ ಮಾಡಬೇಕು. ಈ ದಾಖಲೆಗಳನ್ನು ಅರ್ಜಿ ಸಲ್ಲಿಸುವಾಗ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡದಿದ್ದಲ್ಲಿ ಅಭ್ಯರ್ಥಿಯೊಂದಿಗೆ ಯಾವುದೇ ಪತ್ರ ವ್ಯವಹಾರ ಮಾಡದೇ ವಿನಾಯಿತಿ ಕೋರಿಕೆಯನ್ನು ತಿರಸ್ಕರಿಸಲಾಗುವುದು.**

III) ಇತರೆ ವಿನಾಯಿತಿ: ( Other Exemptions):-

ಕೆಲವು ಪತ್ರಿಕೆಗಳಲ್ಲಿ ಉತ್ತೀರ್ಣರಾದವರಿಗೆ ಈ ಕೆಳಕಂಡ ವಿಷಯಗಳಿಗೆ ವಿನಾಯಿತಿ ಇರುತ್ತದೆ.

| Sl. No. | Subject to be Passed | Exemption in Subject |
|---|---|---|
| 1 | Candidates who have passed the Municipal and Local Boards Examination or Part I of the Block Development Officers and Deputy Block Development Officers Examination are exempted from passing part I of Community Development Examination. | Community Development Part-I |
| 2 | Candidates who have passed part II of the Block Development Officers and Deputy Block Development Officers Examination are exempted from passing Community Development Examination part II. | Community Development Part-II |
| 3 | Officials who have passed Secretariat Manual Part-I Examination are exempted from passing Karnataka Public Service Commission Manual Examination. | K.P.S.C. Manual |
| 4 | Candidates who have passed SAS (All parts) Examination are exempted from appearing for Accounts Higher, Accounts Lower and Local Laws and Commercial Book Keeping subjects. | Accounts Lower, Accounts Higher and Local Laws and Commercial Book Keeping |
| 5 | Candidates who have passed Treasury Accounts Examination (All parts) are exempted from passing Accounts Higher subject. | Accounts Higher |

| | | |
|---|---|---|
| 6 | Accounts Higher | Accounts Lower (ಸರ್ಕಾರದ ಸುತ್ತೋಲೆ ಸಂಖ್ಯೆ: GAD 25 SSR 76,ದಿನಾಂಕ:01/04/1976ರ ಅನ್ವಯ) |
| 7 | Revenue Higher | Revenue Lower (ಸರ್ಕಾರದ ಸುತ್ತೋಲೆ ಸಂಖ್ಯೆ: GAD 25 SSR 76, ದಿನಾಂಕ:01/04/1976ರ ಅನ್ವಯ) |

ಅ). ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 06 ಎಸ್ಎಸ್ಆರ್ 76, ದಿನಾಂಕ 10ನೇ ಜನವರಿ 1977ರ ಅನುಸಾರವಾಗಿ ಸರ್ಕಾರಿ ಆದೇಶ ಸಂಖ್ಯೆ: ಎಎಫ್‌ಡಿ 649 ಇಎನ್‌ಟಿ 57, ದಿನಾಂಕ 23ನೇ/25ನೇ ಫೆಬ್ರವರಿ 1959ರ ಅನುಸಾರವಾಗಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಿಂದ ನಡೆಸಲಾದ ಅರಣ್ಯ ಇಲಾಖಾ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಫಾರೆಸ್ಟ್ ಪರೀಕ್ಷೆಯ **ಪತ್ರಿಕೆ-2 ರಲ್ಲಿ ತೇರ್ಗಡೆಯಾಗುವುದರಿಂದ ವಿನಾಯಿತಿ ನೀಡಲಾಗಿದೆ.**

ಆ). ಸರ್ಕಾರದ ಅಧಿಸೂಚನೆ ಸಂಖ್ಯೆ. ಸಿಆಸುಇ 3 ಸೆಸೇನಿ 2010, ಬೆಂಗಳೂರು, ದಿನಾಂಕ: 02-02-2011 ರನ್ವಯ ಕರ್ನಾಟಕ ಸಿವಿಲ್ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು, 2006ರಲ್ಲಿ ನಿಗದಿಪಡಿಸಿರುವಂತೆ, ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇಮಕಾತಿಗೆ ಆಯ್ಕೆ ಪರೀಕ್ಷೆಯ ಒಂದು ಭಾಗವಾಗಿ ಕರ್ನಾಟಕ ಲೋಕಸೇವಾ ಆಯೋಗ ಅಥವಾ ಇತರೆ ಯಾವುದೇ ಪ್ರಾಧಿಕಾರ ನಡೆಸುವ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಅಭ್ಯರ್ಥಿಗಳಿಗೆ ಕನ್ನಡ ಭಾಷಾ ವಿಷಯದ ಇಲಾಖಾ ಪರೀಕ್ಷೆ ಬರೆಯುವುದರಿಂದ ಸಂಪೂರ್ಣ ವಿನಾಯಿತಿ ಇರುತ್ತದೆ.

ಇ). ಕನ್ನಡ ಭಾಷಾ ವಿಷಯದ ಇಲಾಖಾ ಪರೀಕ್ಷೆ ಬರೆಯುವುದರಿಂದ ವಿನಾಯಿತಿ ಇರುವ ಬಗ್ಗೆ Karnataka Civil Services (Service and Kannada Language Examinations) Rules, 1974ರ ಉಪನಿಯಮ (5) Savings ವಿವರಗಳು ಈ ಕೆಳಕಂಡಂತಿದೆ:-

ಸರ್ಕಾರದ ಅಧಿಸೂಚನೆ ಸಂಖ್ಯೆ: GAD 12 SSR 72, Bangalore, dated 8th January, 1974ರ ಉಪನಿಯಮ

Savings (1) A Government servent who passed-

(a) The Secondary School Leaving Certificate Examination or any Examination declared as equivalent there to by the State Government, or any Examination higher than the Secondary School Leaving Certificate Examination,

i) In which the question papers on different subjects are answered in Kannada Language; or

ii) In which Kannada is the main language, Second Language or an optional subject, [but not one of the subject in a composite paper,] or

[(aa) Diploma Course / Certificate Course in Kannada conducted by a University established by Law in India, or "Kava", "Jana" or "Rathna" Examinations conducted by Kannada Sahitya Parishath]

[(ab) Correspondence Course in Kannada conducted by the Central Institute of Indian Language, Mysore.]

[(ac) Kannada Language Test conducted by the Public Service Commission or any other Selection Authority, as a part of Examination for recruitment to the posts in the State Civil Services as prescribed in the Karnataka Civil Services (Direct Recruitment by Competitive Examinations and Selection) "(General) Rules, 2006" {As per Notification NO.DPAR 3 SSR 2010, Bangalore, Dated:02.02.2011.}]

(b) any examination specified in schedule III as equivalent to the Kannada Language Examination, [or who has won a prize in Kannada Essay Competition conducted by any University established by law,] shall on obtaining a certificate of exemption under sub-rule (5) be deemed to have passed the Kannada Language Examination under these rules]

[provided that a Government Servant who has passed on or before the eight day of July 1982, the Examination specified in clause (a) in which Kannada is one of the subjects in a composite paper shall, on obtaining a certificate of exemption under sub-rule (5) be deemed to have passed Kannada Language Examination under these rules.]

[provided further that a Government servant holding Group-"C" post for which the educational qualification prescribed is less than S.S.L.C. shall, on obtaining a certificate of exemption under sub-rule (5) be deemed to have passed the Kannada Language Examination under these rules, if such Government servant has passed Kannada as the main Language, second language or an optional subject, but not as one of the subjects in a composite paper, in S.S.L.C. even if he has failed in other subjects.]

(2) A Government servant who has passed any examination specified as equivalent to a service examination in schedule III shall on obtaining a certificate of exemption under sub-rule (5) be deemed to have passed the said service examination under these rules.

["(2A) If in schedule III, an examination is specified as equivalent to a service examination for any Department then, the said examination shall, not withstanding that it is not specified as equivalent to a similar service examination for any other Department be deemed to be the equivalent examination to the said service examination for such other Department also, for purposes of sub-rule(2)"];

(3) A Government Servant allotted or deemed to have been allotted to serve in connection with the affairs of the State of Karnataka under Section 115 of the States Re-Organisation Act. 1956 who in his parent State, was exempt from passing any examination specified as equivalent to a service examination, in schedule III on the ground that he has passed some other Examination shall on obtaining a certificate of exemption under sub-rule (5) be deemed to have passed the said service examination under these rules.

(4) A Government Servant allotted or deemed to have been allotted to serve in connection with the affairs of the State of Karnataka under Section 115 of the State Re-organisation Act, 1956 who has attained the age of forty-five years shall be exempt from passing the Kannada Language Examination under these rules.

(5) A Government servant who has passed the examinations referred to in sub-rule (1) or sub-rule(2) or sub-rule(3) may make an application in Form1 in triplicate for a certificate of exemption to the appropriate authority, and the said authority on being satisfied that the applicant has passed the said examination issue a certificate in Form II and make necessary entries of the exemption in the service records of the applicant.

**Explanation**:- For the purposes of this sub-rule "appropriate authority" means:-

i) in the case of a Government servant who is a Head of a Department, the State Government;

ii) in the case of a Government servant who is a Gazetted Officer, other than a Head of a Department, the Head of the Department, or an officer authorized by the Head of the Department;

iii) in the case of a Government servant who is non-Gazetted Officer, the Head of the Office in which such officer is working if the Head of the office is a Gazetted Officer, and if he is not a Gazetted Officer, the next official Superior who is a Gazetted Officer.

(6) Rule (6) is Ommitted.

(7) **Effect of these rules**:- These rules shall have effect notwithstanding anything contained in any rule made under the proviso to article 309 of the Constitution of India or in any order made by the Governor or the State Government in respect of any post, but shall not effect any provision made in any law or rule specifying the qualification [other than passing of a Service Examination or Kannada Langurage Examination] required for recruitment to any post or category of posts in respect of which no provision is made in Schedule-II to these rules.

ವಿನಾಯಿತಿ ಬಗೆಗಿನ ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಕರ್ನಾಟಕ ನಾಗರಿಕ ಸೇವೆಗಳು (ಸೇವೆಗಳು ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974ರ ಉಪನಿಯಮ 05 ನ್ನು ಪರಿಶೀಲಿಸಲು ಸೂಚಿಸಿದೆ.

*****

## ಅನುಬಂಧ-8

**ಲಿಪಿಕಾರರ ಸಹಾಯ ಪಡೆಯುವ ಅಭ್ಯರ್ಥಿಗಳಿಗೆ ಮಾರ್ಗಸೂಚಿ:-**

ಇಲಾಖಾ ಪರೀಕ್ಷೆ ಸಂಬಂಧ ಲಿಪಿಕಾರರ ಸಹಾಯ ಕೋರಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಲಿಪಿಕಾರರ ವಿವರಗಳನ್ನು ಹಾಗೂ ಅವರ ಭಾವಚಿತ್ರವನ್ನು ಆನ್‌ಲೈನ್ ಅರ್ಜಿಯ ನಿಗದಿತ ಅಂಕಣಗಳಲ್ಲಿ ನಮೂದಿಸಿ ಪೂರಕ ದಾಖಲೆಗಳನ್ನು ಅರ್ಜಿಯೊಂದಿಗೆ ಅಪ್‌ಲೋಡ್ ಮಾಡತಕ್ಕದ್ದು. ಆ ನಂತರ ಸಲ್ಲಿಸುವ ಯಾವುದೇ ದಾಖಲೆಗಳನ್ನು ಪರಿಗಣಿಸುವುದಿಲ್ಲ.

1. ದೃಷ್ಟಿಮಾಂದ್ಯತೆ, ಚಲನವಲನ ವೈಕಲ್ಯ ಮತ್ತು ಮೆದುಳಿನ ಪಾರ್ಶ್ವವಾಯು ಈ ಅಂಗವಿಕಲತೆಗಳನ್ನು ಹೊಂದಿರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಜಾರಿ ಮಾಡಿದ ಅನುಬಂಧ-`ಅ' ನಮೂನೆಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಅಪ್ ಲೋಡ್ ಮಾಡತಕ್ಕದ್ದು.
2. ಕ್ರಮಾಂಕ 1ರಲ್ಲಿ ತಿಳಿಸಿರುವ ಅಂಗವೈಕಲ್ಯತೆ ಹೊಂದಿರುವ ಅಭ್ಯರ್ಥಿಗಳನ್ನು ಹೊರತುಪಡಿಸಿ, ಇತರೆ ಎದ್ದು ಕಾಣುವ ಅಂಗವಿಕಲತೆಗಳನ್ನು ಹೊಂದಿರುವ ಅಭ್ಯರ್ಥಿಗಳು ಅನುಬಂಧ-`ಬ' ನಮೂನೆಯಲ್ಲಿ ಪರೀಕ್ಷೆ ಬರೆಯಲು ದೈಹಿಕವಾಗಿ ಅಸಮರ್ಥತೆ ಹೊಂದಿರುವ ಬಗ್ಗೆ ನಿಗದಿಪಡಿಸಿರುವ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ಕಡ್ಡಾಯವಾಗಿ ಅಪ್ ಲೋಡ್ ಮಾಡತಕ್ಕದ್ದು.
3. ಅಭ್ಯರ್ಥಿಗಳು ಅರ್ಜಿಗಳಲ್ಲಿ ನೀಡಿರುವ ಲಿಪಿಕಾರರ ವಿವರಗಳನ್ವಯ ಲಿಪಿಕಾರರಿಗೆ ಪ್ರತ್ಯೇಕವಾಗಿ ಪ್ರವೇಶ ಪತ್ರವನ್ನು ಅಭ್ಯರ್ಥಿಗೆ ನೀಡಲಾಗುತ್ತದೆ. **ಈ ಪ್ರವೇಶ ಪತ್ರದಲ್ಲಿರುವ ಲಿಪಿಕಾರರನ್ನು ಪರೀಕ್ಷೆಗೆ ಕರೆತಂದಲ್ಲಿ ಸದರಿ ಲಿಪಿಕಾರರ ಪ್ರವೇಶ ಪತ್ರದ ಪ್ರತಿಯನ್ನು ಹಾಜರಾಗುವ ಪ್ರತಿ ಪತ್ರಿಕೆಗೆ ಸಂವೀಕ್ಷಕರಿಗೆ ಸಲ್ಲಿಸತಕ್ಕದ್ದು, ಈ ಪ್ರತಿಯ ಮೇಲೆ ಪರೀಕ್ಷಾ ಮೇಲ್ವಿಚಾರಕರು ವಿಷಯ/ಪತ್ರಿಕೆ, ದಿನಾಂಕ ಮತ್ತು ಸಮಯವನ್ನು ನಮೂದಿಸಿ, ಕಡ್ಡಾಯವಾಗಿ ಆಯೋಗಕ್ಕೆ ಕಳುಹಿಸತಕ್ಕದ್ದು. ತಪ್ಪಿದ್ದಲ್ಲಿ ಅಭ್ಯರ್ಥಿಯ ಫಲಿತಾಂಶವನ್ನು ರದ್ದುಪಡಿಸಲಾಗಿರುತ್ತದೆ .**
4. ಅಭ್ಯರ್ಥಿಗಳು ಅರ್ಜಿಗಳಲ್ಲಿ ನೀಡುವ ಲಿಪಿಕಾರರ ವಿವರಗಳ ಮೇರೆಗೆ ಲಿಪಿಕಾರರಿಗೆ ಪ್ರತ್ಯೇಕವಾಗಿ ಪ್ರವೇಶ ಪತ್ರಗಳನ್ನು ಅಭ್ಯರ್ಥಿಗಳಿಗೆ ನೀಡಲಾಗುತ್ತದೆ. **ಸದರಿ ಪ್ರವೇಶ ಪತ್ರದಲ್ಲಿರುವ ಲಿಪಿಕಾರನ ಸಹಾಯದೊಂದಿಗೆ ಪರೀಕ್ಷೆ ಬರೆಯಬಹುದಾಗಿದೆ. ಅನಿವಾರ್ಯ ಕಾರಣದಿಂದಾಗಿ ಬೇರೆ ಲಿಪಿಕಾರರೊಂದಿಗೆ ಪರೀಕ್ಷೆಗೆ ಹಾಜರಾದಲ್ಲಿ ಕಡ್ಡಾಯವಾಗಿ ಪ್ರತಿ ವಿಷಯ/ಪತ್ರಿಕೆಗೆ ಅನುಬಂಧ-`ಕ' ನಮೂನೆಯಲ್ಲಿ ವಿವರಗಳನ್ನು ನೀಡಿ ಲಿಪಿಕಾರರ ಭಾವಚಿತ್ರವನ್ನು ಅಂಟಿಸಿ ಪರೀಕ್ಷಾ ಉಪ ಕೇಂದ್ರದ ಮೇಲ್ವಿಚಾರಕರಿಗೆ ನೀಡತಕ್ಕದ್ದು. ತಪ್ಪಿದ್ದಲ್ಲಿ ಅಭ್ಯರ್ಥಿಯ ಫಲಿತಾಂಶವನ್ನು ರದ್ದುಪಡಿಸಲಾಗಿರುತ್ತದೆ .**
5. ಇಲಾಖಾ ಪರೀಕ್ಷೆ ಸಂಬಂಧವಾಗಿ ಅಭ್ಯರ್ಥಿಗಳು ಲಿಪಿಕಾರರನ್ನು ಸ್ವತಃ ಕರೆತಂದಲ್ಲಿ ಲಿಪಿಕಾರರ ವಿದ್ಯಾರ್ಹತೆ ಅಭ್ಯರ್ಥಿಯು ಕರ್ತವ್ಯ ನಿರ್ವಹಿಸುತ್ತಿರುವ ಪದನಾಮಕ್ಕಿಂತ ಒಂದು ಕೆಳಹಂತದ

ವಿದ್ಯಾರ್ಹತೆಯಾಗಿರಬೇಕು. ಆಯೋಗವೇ ಲಿಪಿಕಾರರನ್ನು ಒದಗಿಸಿದಲ್ಲಿ ಅಭ್ಯರ್ಥಿಯ ಪದನಾಮದ ವಿದ್ಯಾರ್ಹತೆಗೆ ಸಮನಾಂತರ ಅಥವಾ ಕೆಳಹಂತದ ಲಿಪಿಕಾರರನ್ನು ಒದಗಿಸಲಾಗುತ್ತದೆ.

6. ಆಯೋಗದ ಅನುಮತಿ ಪಡೆಯದೆ ಲಿಪಿಕಾರರೊಂದಿಗೆ ಪರೀಕ್ಷೆಗೆ ಹಾಜರಾದಲ್ಲಿ ಅಂತಹ ವಿಷಯ/ಪತ್ರಿಕೆಯ ಫಲಿತಾಂಶವನ್ನು ರದ್ದುಪಡಿಸಲಾಗುವುದು. ಇತರೆ ಸೂಚನೆಗಳಿಗೆ ಈ ಕೆಳಕಂಡ ಸರ್ಕಾರದ ಆದೇಶವನ್ನು ಪಾಲಿಸತಕ್ಕದ್ದು,

**ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 272 ಸೇನೆನಿ 2013, ದಿನಾಂಕ: 11.02.2021 ರ ಆದೇಶದಲ್ಲಿ** ಈ ಕೆಳಕಂಡ ಅಂಗ ವೈಕಲ್ಯತೆಯ ಅಭ್ಯರ್ಥಿಗಳು ಲಿಪಿಕಾರರ ಸಹಾಯ ಪಡೆದು ಪರೀಕ್ಷೆ ಬರೆಯುವ ಸಂಬಂಧ ಹೊರಡಿಸಿರುವ ಮಾರ್ಗಸೂಚಿಯು ಕೆಳಕಂಡಂತಿದೆ:-

1) ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಆಯ್ಕೆ ಪ್ರಾಧಿಕಾರ ನಡೆಸುವ ಲಿಖಿತ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಬರವಣಿಗೆ ಸಾಮರ್ಥ್ಯವನ್ನು ಕುಂಠಿತಗೊಳಿಸುವ ದೃಷ್ಟಿಮಾಂದ್ಯತೆ, ಚಲನವಲನ ವೈಕಲ್ಯ ಮತ್ತು ಮೆದುಳಿನ ಪಾರ್ಶ್ವವಾಯು ಅಂಗವಿಕಲತೆಗಳನ್ನು ಮತ್ತು ಇತರೆ ವರ್ಗಗಳ ಎದ್ದುಕಾಣುವ ಅಂಗವಿಕಲತೆಗಳನ್ನು (Blindness, Locomotor disability, Cerebral palsy and other categories of benchmark disabilities) ಹೊಂದಿರುವ ಅಭ್ಯರ್ಥಿಗಳಿಗೆ ಈ ಮಾರ್ಗಸೂಚನೆಗಳು ಅನ್ವಯವಾಗುತ್ತವೆ;

2) 2016ರ ಅಧಿನಿಯಮದ ಕಲಂ 2(r)ರಲ್ಲಿ 'ಎದ್ದುಕಾಣುವ ಅಂಗವಿಕಲತೆಯನ್ನು ಹೊಂದಿರುವ ವ್ಯಕ್ತಿ' (Person with benchmark disability) ಎಂಬುದನ್ನು ಈ ಕೆಳಗೆ ಉದ್ಧರಿಸಿದಂತೆ ಪರಿಭಾಷಿಸಲಾಗಿದೆ;

> ***"(r)"person with benchmark disability" means a person with not less than forty percent, of a specified disability where specified disability has not been defined in measurable terms and includes a person with disability where specified disability has been defined in measurable terms, as certified by the certifying authority."***

ಅಲ್ಲದೇ 2016ರ ಅಧಿನಿಯಮದ ಕಲಂ 2 (zc) ರಲ್ಲಿ "specified disability" ಎಂಬುದನ್ನು ಈ ಕೆಳಗೆ ಉದ್ಧರಿಸಿದಂತೆ ಪರಿಭಾಷಿಸಲಾಗಿದೆ.

***"(zc) "specified disability" means the disabilities as specified in the schedule."***

3) 2016ರ ಅಧಿನಿಯಮದ ಕಲಂ 2 (ಆರ್) ಅಡಿಯಲ್ಲಿ ವ್ಯಾಖ್ಯಾನಿಸಿರುವಂತೆ ಎದ್ದುಕಾಣುವ ಅಂಗವಿಕಲತೆ ಹೊಂದಿರುವ ಯಾವುದೇ ಅಭ್ಯರ್ಥಿಯು ಬರವಣಿಗೆಯ ವೇಗವನ್ನು ಒಳಗೊಂಡಂತೆ ಬರವಣಿಗೆಯಲ್ಲಿ ಯಾವುದೇ ಅಸಮರ್ಥತೆಯನ್ನು ಹೊಂದಿದ್ದು, ಲಿಪಿಕಾರರ ಸೌಲಭ್ಯವನ್ನು ಒದಗಿಸಬೇಕೆಂದು ಆತ ಇಚ್ಛಿಪಟ್ಟಲ್ಲಿ, ಆ ಸೌಲಭ್ಯವನ್ನು ಆತನಿಗೆ ನೀಡತಕ್ಕದ್ದು;

4) ದೃಷ್ಟಿಮಾಂದ್ಯತೆ, ಚಲನವಲನ ವೈಕಲ್ಯ (ಎರಡೂ ತೋಳುಗಳು ಪೀಡಿತಗೊಂಡಂತಹ-BA) ಮತ್ತು ಮೆದುಳಿನ ಪಾರ್ಶ್ವವಾಯು – ಈ ಎದ್ದುಕಾಣುವ ಅಂಗವಿಕಲತೆಯೊಂದನ್ನು ಹೊಂದಿರುವ ಅಭ್ಯರ್ಥಿಯು ಇಚ್ಛಿಪಟ್ಟಿಲ್ಲಿ, ಆತನಿಗೆ ಲಿಪಿಕಾರರ ಸೌಲಭ್ಯವನ್ನು ಒದಗಿಸತಕ್ಕದ್ದು.

5) ಇತರೆ ವರ್ಗಗಳ ಎದ್ದುಕಾಣುವ ಅಂಗವಿಕಲತೆ ಹೊಂದಿದ ಅಭ್ಯರ್ಥಿಗಳ ಪ್ರಕರಣಗಳಲ್ಲಿ ಅನುಬಂಧ-'ಬ' ರ ನಮೂನೆಯಲ್ಲಿ ಸಂಬಂಧಿಸಿದ ಅಭ್ಯರ್ಥಿಯು ಬರೆಯಲು ದೈಹಿಕ ಅಸಮರ್ಥತೆ ಹೊಂದಿದ್ದಾನೆ ಎಂದು ವೈದ್ಯಕೀಯ ಮಂಡಳಿಯಿಂದ ಪ್ರಮಾಣಪತ್ರವನ್ನು ಪಡೆದು ಅರ್ಜಿಯೊಂದಿಗೆ ಅಪ್‌ಲೋಡ್ ಮಾಡುವ ಅಭ್ಯರ್ಥಿಗಳಿಗೆ ಮಾತ್ರ ಲಿಪಿಕಾರರ ಸೌಲಭ್ಯವನ್ನು ಒದಗಿಸಲಾಗುತ್ತದೆ.

6) ಅಭ್ಯರ್ಥಿಯು ತನ್ನ ಸ್ವತಃ ಲಿಪಿಕಾರನನ್ನು ಕರೆತರುವ ಅವಕಾಶ ಕಲ್ಪಿಸಬೇಕು ಅಥವಾ ಲಿಪಿಕಾರರ ಸೇವೆಯನ್ನು ಒದಗಿಸಲು ಆಯ್ಕೆ ಪ್ರಾಧಿಕಾರ/ಆಯೋಗವನ್ನು ಕೋರಲು ಅವಕಾಶವಿರಬೇಕು. ಪರೀಕ್ಷೆಗಳ ಅವಶ್ಯಕತೆಯ ಅನುಸಾರ ಆಯ್ಕೆ ಪ್ರಾಧಿಕಾರ/ ಆಯೋಗವು ಜಿಲ್ಲಾ/ವಿಭಾಗ/ ರಾಜ್ಯ ಮಟ್ಟದಲ್ಲಿ ಲಿಪಿಕಾರರನ್ನು ಗುರುತಿಸಿ ಅವರ ಹೆಸರುಗಳ ಪಟ್ಟಿಗಳನ್ನು ತಯಾರಿಸಬಹುದು. ಅಂತಹ ಸಂದರ್ಭದಲ್ಲಿ ಅಭ್ಯರ್ಥಿಯು ತನಗೆ ಒದಗಿಸಲಿರುವ ಲಿಪಿಕಾರನು ಅರ್ಹನೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಲು ಅನುವಾಗುವಂತೆ ಪರೀಕ್ಷೆಗೆ ಎರಡು ದಿನಗಳ ಮೊದಲೇ ಲಿಪಿಕಾರನನ್ನು ಭೇಟಿ ಮಾಡಲು ಅಭ್ಯರ್ಥಿಗೆ ಅವಕಾಶ ಕಲ್ಪಿಸಬೇಕು;

7) ಲಿಪಿಕಾರನನ್ನು ಒದಗಿಸಿದಲ್ಲಿ, ಆತನ ವಿದ್ಯಾರ್ಹತೆಯು ಪರೀಕ್ಷೆಗೆ ನಿಗದಿಪಡಿಸಿರುವ ಕನಿಷ್ಟ ವಿದ್ಯಾರ್ಹತೆಗಿಂತ ಹೆಚ್ಚಿರಬಾರದು ಎಂದು ಆಯ್ಕೆ ಪ್ರಾಧಿಕಾರ/ಆಯೋಗವು ಖಚಿತಪಡಿಸಿಕೊಳ್ಳಬೇಕು. ಆದಾಗ್ಯೂ, ಲಿಪಿಕಾರನು ಹೊಂದಿರುವ ವಿದ್ಯಾರ್ಹತೆಯು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಗಿಂತ ಕಡಿಮೆ ಇರತಕ್ಕದ್ದಲ್ಲ. ಆದರೆ, ತನ್ನದೇ ಆದ ಲಿಪಿಕಾರನನ್ನು ಕರೆತರಲು ಅಭ್ಯರ್ಥಿಗೆ ಅವಕಾಶ ಕಲ್ಪಿಸಿದಲ್ಲಿ, ಅಂತಹ ಲಿಪಿಕಾರನು ಹೊಂದಿರುವ ವಿದ್ಯಾರ್ಹತೆಯು, ಸದರಿ ಅಭ್ಯರ್ಥಿಯು ಹೊಂದಿರುವ ವಿದ್ಯಾರ್ಹತೆಗಿಂತ ಒಂದು ಹಂತ ಕೆಳಗಿರಬೇಕು. ಅಭ್ಯರ್ಥಿಯು ತನ್ನದೇ ಆದ ಲಿಪಿಕಾರರ ಸೇವೆಯನ್ನು ಪಡೆಯುವ ಸಂದರ್ಭದಲ್ಲಿ ಅನುಬಂಧ-'ಕ' ನಮೂನೆಯಲ್ಲಿ ಲಿಪಿಕಾರನ ವಿವರಗಳನ್ನು ಸಲ್ಲಿಸತಕ್ಕದ್ದು;

8) ತುರ್ತು ಸಂದರ್ಭದಲ್ಲಿ ಲಿಪಿಕಾರನನ್ನು ಬದಲಾಯಿಸಲು ಅವಕಾಶ ನೀಡಬೇಕು. ಬೇರೆ ಬೇರೆ ಉತ್ತರ ಪತ್ರಿಕೆಗಳನ್ನು ಬರೆಯಲು, ಅದರಲ್ಲಿಯೂ ಮುಖ್ಯವಾಗಿ ವಿವಿಧ ಭಾಷಾ ಉತ್ತರ ಪತ್ರಿಕೆಗಳನ್ನು ಬರೆಯಲು, ಒಂದಕ್ಕಿಂತ ಹೆಚ್ಚು ಲಿಪಿಕಾರರ ಸೇವೆಯನ್ನು ಪಡೆದುಕೊಳ್ಳಲು ಅಭ್ಯರ್ಥಿಗಳಿಗೆ ಅವಕಾಶ ನೀಡಲಾಗಿದೆ. ಆದರೆ, ಒಂದು ವಿಷಯಕ್ಕೆ ಕೇವಲ ಓರ್ವ ಲಿಪಿಕಾರನು ಇರತಕ್ಕದ್ದು;

9) ಎದ್ದುಕಾಣುವ ಅಂಗವಿಕಲತೆ ಹೊಂದಿರುವ ಅಭ್ಯರ್ಥಿಗಳು ಕಂಪ್ಯೂಟರ್‌ನಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳಲು ಅನುಮತಿಸಿದಲ್ಲಿ ಸಾಫ್ಟ್ ವೇರ್ ಅಥವಾ ಸಿಸ್ಟಂನಲ್ಲಿ ಯಾವುದೇ ಸಮಸ್ಯೆ ಇದ್ದಲ್ಲಿ ಸರಿಪಡಿಸಲು ಅನುಕೂಲವಾಗುವಂತೆ ಅವರುಗಳು ಕಂಪ್ಯೂಟರ್ ಅನ್ನು ಒಂದು ದಿನ ಮುಂಚಿತವಾಗಿ ಪರೀಕ್ಷಿಸಲು ಅವಕಾಶ ನೀಡತಕ್ಕದ್ದು. ಪರೀಕ್ಷೆಯನ್ನು ತೆಗೆದುಕೊಳ್ಳಲು ಸ್ವಂತ ಗಣಕಯಂತ್ರ/ ಲ್ಯಾಪ್ ಟಾಪ್ ಬಳಕೆಯನ್ನು ಅನುಮತಿಸತಕ್ಕದ್ದಲ್ಲ. ಆದಾಗ್ಯೂ ಗಣಕಯಂತ್ರ ಆಧಾರಿತ ಪರೀಕ್ಷೆಗಳಿಗಾಗಿ ಅನುಕೂಲಕರವಾದ ಪರಿಕರಗಳಾದ ಕೀಬೋರ್ಡ್, ಕಸ್ಟ್ ಮೈಸ್ಡ್ ಮೌಸ್ ಇತ್ಯಾದಿಗಳ ಬಳಕೆಯನ್ನು ಅನುಮತಿಸಬೇಕು.

10) 2016 ರ ಅಧಿನಿಯಮದಲ್ಲಿ ಗೊತ್ತುಪಡಿಸಿದಂತೆ ಎದ್ದುಕಾಣುವ ಅಂಗವಿಕಲತೆ (benchmark disability) ಅಥವಾ ನಿರ್ದಿಷ್ಟಪಡಿಸಿದ ಅಂಗವಿಕಲತೆ (specified disability) ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸುವ ಸಮಯದಲ್ಲಿ, ಇತರೆ ಅಗತ್ಯ ದಾಖಲೆಗಳೊಂದಿಗೆ, ಅಂಗವಿಕಲತೆಗೆ ಸಂಬಂಧಿಸಿದ ಮೀಸಲಾತಿಯನ್ನು ಕೋರಿ ಅಂಗವಿಕಲತೆಯ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಅಪ್ಲೋಡ್ ಮಾಡಬೇಕು. ಅಭ್ಯರ್ಥಿಯು ಪರೀಕ್ಷೆಯನ್ನು ಬರೆಯಲು ದೈಹಿಕ ಅಸಮರ್ಥತೆ ಹೊಂದಿರುತ್ತೇನೆಂದು ಭಾವಿಸಿದಲ್ಲಿ, ಮೇಲ್ಕಂಡಂತೆ ನೇಮಕಾತಿಗಾಗಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಪರೀಕ್ಷೆಯನ್ನು ಬರೆಯಲು ಅವನು ದೈಹಿಕ ಅಸಮರ್ಥತೆ ಹೊಂದಿದ್ದಾನೆ ಎಂದು ವೈದ್ಯಕೀಯ ಮಂಡಳಿಯಿಂದ ಮೇಲಿನ ಉಪಕಂಡಿಕೆ 5 ರಲ್ಲಿ ನಿಗದಿ ಪಡಿಸಿದ ನಮೂನೆಯಲ್ಲಿ (ಅನುಬಂಧ-1) ಪ್ರಮಾಣ ಪತ್ರವನ್ನು ಸಹ ಪಡೆದು ಅರ್ಜಿಯೊಂದಿಗೆ ಅಪ್‌ಲೋಡ್ ಮಾಡತಕ್ಕದ್ದು.

11) ಮೇಲೆ ವಿವರಿಸಿದಂತೆ ಅಂಗವಿಕಲತೆ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಂಗವಿಕಲತೆ ಪ್ರಮಾಣ ಪತ್ರದ ಜೊತೆಗೆ, ತಮಗೆ ಲಿಖಿತ ಪರೀಕ್ಷೆಯನ್ನು ಬರೆಯಲು ಲಿಪಿಕಾರನ ಅವಶ್ಯಕತೆ ಇದೆಯೇ ಎಂಬುದನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಈ ಉದ್ದೇಶಕ್ಕಾಗಿ, ಮೇಲಿನ ಉಪಕಂಡಿಕೆ (5) ರಲ್ಲಿ ಉಲ್ಲೇಖಿಸಲಾದ ಪ್ರಮಾಣ ಪತ್ರ ಮತ್ತು ಉಪಕಂಡಿಕೆ (7) ರಲ್ಲಿ ಉಲ್ಲೇಖಿಸಲಾದ ಮುಚ್ಚಳಿಕೆ ಪತ್ರದ ನಮೂನೆಗಳಲ್ಲಿ ನೀಡತಕ್ಕದ್ದು. ಲಿಪಿಕಾರನ ಅವಶ್ಯಕತೆ ಇದ್ದಲ್ಲಿ, ಲಿಪಿಕಾರನ ವಿವರಗಳನ್ನು ಆ ಮುಚ್ಚಳಿಕೆ ಪತ್ರದ ನಮೂನೆಯಲ್ಲಿ ನೀಡತಕ್ಕದ್ದು;

12) **ಲಿಪಿಕಾರರ ಸೇವೆಯನ್ನು ಪಡೆಯಲು ಅನುಮತಿಸಲಾದ ಅಭ್ಯರ್ಥಿಗಳಿಗೆ ಪ್ರತಿ ಗಂಟೆಗೆ 20 ನಿಮಿಷಗಳ ಪರಿಹಾರ ಸಮಯವನ್ನು ನೀಡಲಾಗುವುದು.** ಲಿಪಿಕಾರನ ಸೌಲಭ್ಯವನ್ನು ಪಡೆಯದಿರುವ, ಎದ್ದುಕಾಣುವ ಅಂಗವಿಕಲತೆ ಹೊಂದಿರುವ ಎಲ್ಲಾ ಅಭ್ಯರ್ಥಿಗಳಿಗೆ ಮೂರು ಗಂಟೆಗಳ ಅವಧಿಯ ಪರೀಕ್ಷೆಗಾಗಿ ಒಂದು ಗಂಟೆಯ ಹೆಚ್ಚುವರಿ ಸಮಯವನ್ನು ಅನುಮತಿಸಬಹುದು. ಪರೀಕ್ಷಾ ಅವಧಿಯು ಒಂದು ಗಂಟೆಗಿಂತ ಕಡಿಮೆ ಇದ್ದಲ್ಲಿ ಈ ಹೆಚ್ಚುವರಿ ಸಮಯದ ಅವಧಿಯನ್ನು ಅದೇ ಪ್ರಮಾಣದ ಆಧಾರದ ಮೇಲೆ (on pro-rata basis) ಅನುಮತಿಸಬೇಕು. ಹೆಚ್ಚುವರಿ ಸಮಯವು ಐದು ನಿಮಿಷಗಳಿಗಿಂತ ಕಡಿಮೆಯಿರಬಾರದು ಮತ್ತು ಐದರ ಗುಣಕದಲ್ಲಿ (in multiples of five) ಇರಬೇಕು;

13) ಪರೀಕ್ಷಾ ದಿನದಂದು ಪರೀಕ್ಷೆಯ ಪ್ರಾರಂಭಕ್ಕೆ ಮುಂಚೆ ಗೊಂದಲ ಮತ್ತು ವಿಚಲಿತತೆಯನ್ನು ತಪ್ಪಿಸಲು ನೆಲಮಹಡಿಯಲ್ಲಿ ಪ್ರಾಶಸ್ತ್ಯ ಕೊಟ್ಟು ಸರಿಯಾದ ಆಸನ ವ್ಯವಸ್ಥೆಯನ್ನು ಮಾಡಬೇಕು. ಪ್ರಶ್ನೆ ಪತ್ರಿಕೆಗಳನ್ನು ನೀಡಿದ ಸಮಯವನ್ನು ನಿಖರವಾಗಿ ಗುರುತಿಸಬೇಕು ಮತ್ತು ಪೂರಕ ಪತ್ರಿಕೆಗಳನ್ನು ವಿಳಂಬಕ್ಕೆ ಎಡೆ ಮಾಡದಂತೆ ಸಕಾಲದಲ್ಲಿ ನೀಡುವುದನ್ನು ಖಚಿತಪಡಿಸಿಕೊಳ್ಳಬೇಕು;

14) ಅಭ್ಯರ್ಥಿಯು ಆಯ್ಕೆ ಮಾಡಿಕೊಂಡ ಲಿಪಿಕಾರನಿಗೆ ಆಯೋಗದಿಂದ/ ಆಯ್ಕೆ ಪ್ರಾಧಿಕಾರದಿಂದ ಒಂದು ಪ್ರವೇಶ ಪತ್ರವನ್ನು ನೀಡತಕ್ಕದ್ದು. ಅದರಲ್ಲಿ ಲಿಪಿಕಾರನ ವಿವರಗಳು ಹಾಗೂ ಭಾವಚಿತ್ರವಿರತಕ್ಕದ್ದು. ಈ ಎಲ್ಲಾ ವಿವರಗಳನ್ನು ಅರ್ಜಿಯಲ್ಲಿ ಇರಿಸತಕ್ಕದ್ದು.

15) ಅಭ್ಯರ್ಥಿಯು ಸ್ವತಃ ಕರೆತರುವ ಲಿಪಿಕಾರನ ದುರ್ನಡತೆಗೆ ಅಭ್ಯರ್ಥಿಯೇ ಜವಾಬ್ದಾರನಾಗಿರುತ್ತಾನೆ;

16) ಲಿಪಿಕಾರ ಹಾಗೂ ಅಭ್ಯರ್ಥಿಯ ನಡುವೆ ನಡೆಯುವ ಸಂವಾದವು ಪರೀಕ್ಷಾ ಕೊಠಡಿಯಲ್ಲಿನ ಶಾಂತಿಗೆ ಭಂಗ ತರಬಾರದು ಅಥವಾ ಅದೇ ಕೊಠಡಿಯಲ್ಲಿರುವ ಇತರೆ ಅಭ್ಯರ್ಥಿಗಳಿಗೆ ತೊಂದರೆ ಉಂಟು ಮಾಡವಂತಿರಬಾರದು;

17) ವೈದ್ಯಕೀಯ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿ ಯಾವುದೇ ಪ್ರಯಾಣ ಭತ್ಯೆ/ ದಿನಭತ್ಯೆ ಪಡೆಯಲು ಅರ್ಹನಾಗಿರುವುದಿಲ್ಲ.

**ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 12 ಸೇನೆನಿ 2023 ಬೆಂಗಳೂರು, ದಿನಾಂಕ:23.01.2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಆಯ್ಕೆಯಾಗಿ ನೇಮಕಾತಿ ಹೊಂದಿದ್ದು, ಬರವಣಿಗೆ ಸಾಮರ್ಥ್ಯವನ್ನು ಕುಂಠಿತಗೊಳಿಸುವ ದೃಷ್ಟಿಮಾಂದ್ಯತೆ, ಚಲನವಲನ ವೈಕಲ್ಯ ಮತ್ತು ಮೆದುಳಿನ ಪಾರ್ಶ್ವವಾಯು ಅಂಗವಿಲಕತೆಗಳನ್ನು ಮತ್ತು ಇತರೆ ವರ್ಗಗಳ ಎದ್ದು ಕಾಣುವ ಅಂಗವಿಕಲತೆಗಳನ್ನು (Blindness, Locomotor disability, Cerebral palsy and other categories of benchmark disabilities) ಹೊಂದಿರುವ ನೌಕರರು/ಸಿಬ್ಬಂದಿಗಳಿಗೆ ಕರ್ನಾಟಕ ಲೋಕಸೇವಾ ಆಯೋಗವು ನಡೆಸುವ ಇಲಾಖಾ ಪರೀಕ್ಷೆಗಳಲ್ಲಿ ಲಿಪಿಕಾರರ ಸೇವೆಯನ್ನು ಒದಗಿಸಲು ಈ ಕೆಳಕಂಡ ಮಾರ್ಗಸೂಚನೆಗಳನ್ನು ಈ ಮೂಲಕ ಗೊತ್ತುಪಡಿಸಲಾಗಿದೆ.

1. ಅಂಗವಿಕಲ ವ್ಯಕ್ತಿಗಳ ಅಧಿನಿಯಮ 2016ರ ಕಲಂ 2 (ಆರ್) ಅಡಿಯಲ್ಲಿ ವ್ಯಾಖ್ಯಾನಿಸಿರುವಂತೆ ಎದ್ದುಕಾಣುವ ಅಂಗವಿಕಲತೆ ಹೊಂದಿರುವ ಯಾವುದೇ ಸರ್ಕಾರಿ ನೌಕರರು ಬರವಣಿಗೆಯ ವೇಗವನ್ನು ಒಳಗೊಂಡಂತೆ ಬರವಣಿಗೆಯಲ್ಲಿ ಯಾವುದೇ ಅಸಮರ್ಥತೆಯನ್ನು ಹೊಂದಿದ್ದು, ಲಿಪಿಕಾರರ ಸೌಲಭ್ಯವನ್ನು ಒದಗಿಸಬೇಕೆಂದು ಇಚ್ಛಿಪಟ್ಟಲ್ಲಿ ಆ ಸೌಲಭ್ಯವನ್ನು ಅವರಿಗೆ ನೀಡತಕ್ಕದ್ದು.
2. ಇಲಾಖಾ ಪರೀಕ್ಷೆಗಳನ್ನು ನಡೆಸುವ ಕರ್ನಾಟಕ ಲೋಕಸೇವಾ ಆಯೋಗವು ದೃಷ್ಟಿಮಾಂದ್ಯತೆ, ಚಲನವಲನ ವೈಕಲ್ಯ (ಎರಡೂ ತೋಳುಗಳು ಪೀಡಿತಗೊಂಡಂತಹ-BA) ಮತ್ತು ಮೆದುಳಿನ ಪಾರ್ಶ್ವವಾಯು ಈ ಎದ್ದುಕಾಣುವ ಅಂಗವಿಕಲತೆಯೊಂದನ್ನು ಹೊಂದಿರುವ ನೌಕರರು ಇಚ್ಛಿಪಟ್ಟಲ್ಲಿ ಅವರಿಗೆ ಲಿಪಿಕಾರರ ಸೌಲಭ್ಯವನ್ನು ಒದಗಿಸತಕ್ಕದ್ದು.
3. ಇತರೆ ವರ್ಗಗಳ ಎದ್ದುಕಾಣುವ ಅಂಗವಿಕಲತೆ ಹೊಂದಿದ ನೌಕರರ ಪ್ರಕರಣಗಲಲ್ಲಿ **ಅನುಬಂಧ-1**ರ ನಮೂನೆಯಲ್ಲಿ ಸಂಬಂಧಿಸಿದ ನೌಕರರು ಬರೆಯುವ ದೈಹಿಕ ಅಸಮರ್ಥತೆ ಹೊಂದಿದ್ದಾರೆ ಎಂದು ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರವನ್ನು ಪಡೆದಲ್ಲಿ ಅಂತಹ ನೌಕರರಿಗೆ ಲಿಪಿಕಾರರ ಸೌಲಭ್ಯವನ್ನು ಒದಗಿಸತಕ್ಕದ್ದು.
4. ಎದ್ದು ಕಾಣುವ ಅಂಗವಿಕಲತೆ ಹೊಂದಿರುವ ನೌಕರರು ಲಿಪಿಕಾರರನ್ನು ಒದಗಿಸುವಂತೆ ಕೋರಿಕೆ ಸಲ್ಲಿಸಿದ್ದಲ್ಲಿ ಪರೀಕ್ಷೆಗಳ ಅವಶ್ಯಕತೆಯ ಅನುಸಾರ ಆಯೋಗವು ಜಿಲ್ಲಾ/ವಿಭಾಗ/ರಾಜ್ಯ ಮಟ್ಟದಲ್ಲಿ ಲಿಪಿಕಾರರನ್ನು ಗುರುತಿಸಿ ಅವರ ಹೆಸರುಗಳ ಪಟ್ಟಿಗಳನ್ನು ತಯಾರಿಸತಕ್ಕದ್ದು. ಇಂತಹ ಸಂದರ್ಭದಲ್ಲಿ ಆಯೋಗವು ಒದಗಿಸಲಿರುವ ಲಿಪಿಕಾರ ಅರ್ಹನೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಲು ಅನುವಾಗುವಂತೆ ಪರೀಕ್ಷೆಗೆ ಎರಡು ದಿನಗಳ ಮೊದಲೇ ಲಿಪಿಕಾರರನ್ನು ಭೇಟಿ ಮಾಡಲು ಅಂಗವಿಕಲ ನೌಕರರಿಗೆ ಅವಕಾಶ ಕಲ್ಪಿಸಬೇಕು.
5. ಲಿಪಿಕಾರರ ವಿದ್ಯಾರ್ಹತೆಯು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಗಿಂತ ಕಡಿಮೆ ಇರತಕ್ಕದ್ದಲ್ಲ. **ಲಿಪಿಕಾರರಾಗಿ ನೆರವು ನೀಡುವವರು ಯಾವುದೇ ಸರ್ಕಾರಿ ಸೇವೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರಬಾರದು.** ಅಂಗವಿಕಲ ನೌಕರನು ತನ್ನದೇ ಆದ ಲಿಪಿಕಾರರ ಸೇವೆಯನ್ನು ಪಡೆಯುವ ಸಂದರ್ಭದಲ್ಲಿ ಅನುಬಂಧ-2 ರ ನಮೂನೆಯಲ್ಲಿ ಲಿಪಿಕಾರನ ವಿವರಗಳನ್ನು ಸಲ್ಲಿಸತಕ್ಕದ್ದು ಸಂದರ್ಭದಲ್ಲಿ ಲಿಪಿಕಾರನನ್ನು ಬದಲಾಯಿಸಲು ಅವಕಾಶ ನೀಡಬೇಕು;
6. ಲಿಪಿಕಾರರ ಸೇವೆಯನ್ನು ಪಡೆಯಲು ಅರ್ಹರಾದ ನೌಕರರಿಗೆ ಮತ್ತು ಬರವಣಿಗೆ ಸಾಮರ್ಥ್ಯವು ಸಾಮಾನ್ಯ ಮಟ್ಟದಲ್ಲಿರದ ಅಂಗವಿಕಲ ನೌಕರರಿಗೆ ಪ್ರತಿ ಗಂಟೆಗೆ 20 ನಿಮಿಷಗಳ ಪರಿಹಾರ ಸಮಯವನ್ನು ನೀಡತಕ್ಕದ್ದು.

7. ಅಂಗವಿಕಲ ನೌಕರರು ಆಯ್ಕೆ ಮಾಡಿಕೊಂಡ ಲಿಪಿಕಾರನಿಗೆ ಆಯೋಗದಿಂದ ಒಂದು ಪ್ರವೇಶ ಪತ್ರವನ್ನು ನೀಡತಕ್ಕದ್ದು. ಅದರಲ್ಲಿ ಲಿಪಿಕಾರನ ವಿವರಗಳು ಹಾಗೂ ಭಾವಚಿತ್ರವಿರತಕ್ಕದ್ದು;
8. ಅಂಗವಿಕಲ ನೌಕರರು ಸ್ವತಃ ಕರೆತರುವ ಲಿಪಿಕಾರನ ದುರ್ನಡತೆಗೆ ಅಂಗವಿಕಲ ನೌಕರರೇ ಜವಾಬ್ದಾರನಾಗಿರುತ್ತಾರೆ;
9. ಲಿಪಿಕಾರ ಹಾಗೂ ಅಂಗವಿಕಲ ನೌಕರರ ನಡುವೆ ನಡೆಯುವ ಸಂವಾದವು ಪರೀಕ್ಷಾ ಕೊಠಡಿಯಲ್ಲಿನ ಶಾಂತಿಗೆ ಭಂಗ ತರಬಾರದು ಅಥವಾ ಅದೇ ಕೊಠಡಿಯಲ್ಲಿರುವ ಇತರೆ ನೌಕರರುಗಳಿಗೆ ತೊಂದರೆ ಉಂಟು ಮಾಡುವಂತಿರಬಾರದು;

4. ಇಲಾಖಾ ಪರೀಕ್ಷೆ ನಡೆಸುವ ಸಂದರ್ಭದಲ್ಲಿ ಕರ್ನಾಟಕ ಲೋಕಸೇವಾ ಆಯೋಗ ಹಾಗೂ ಎದ್ದುಕಾಣುವ ಅಂಗವಿಕಲತೆಯುಳ್ಳ ನೌಕರರು ಮೇಲಿನ ಮಾರ್ಗಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಿದೆ.

**<u>ವಿಶೇಷ ಸೂಚನೆ:-</u>**

1) ಇಲಾಖಾ ಪರೀಕ್ಷೆಗೆ ಸರ್ಕಾರಿ ಮತ್ತು ಸರ್ಕಾರಿ ಅನುಧಾನಿತ ಸಂಸ್ಥೆಗಳ ಖಾಯಂ ನೌಕರರುಗಳು ಮಾತ್ರ ಅರ್ಜಿ ಸಲ್ಲಿಸುವ ಕಾರಣ ಅಭ್ಯರ್ಥಿಯು ಕರ್ತವ್ಯ ನಿರ್ವಹಿಸುತ್ತಿರುವ ಪದನಾಮಕ್ಕೆ ನಿಗದಿ ಪಡಿಸಿರುವ ವಿದ್ಯಾರ್ಹತೆಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ.

2) ಲಿಪಿಕಾರರ ಸಹಾಯ ಪಡೆಯುವ ಅಂಧ/ಎದ್ದು ಕಾಣುವ ಅಂಗವೈಕಲ್ಯತೆಯ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗ ಲಿಪಿಕಾರರ ಭಾವಚಿತ್ರ ಹಾಗೂ ಸಹಿ ಮತ್ತು ದೈಹಿಕ ಅಸಮರ್ಥತೆಯ ಪ್ರಮಾಣ ಪತ್ರ (ಅನುಬಂಧ-`ಅ') ಮತ್ತು (ಅನುಬಂಧ-'ಬ')ಅನ್ನು ಕಡ್ಡಾಯವಾಗಿ ಅಪ್‌ಲೋಡ್ ಮಾಡತಕ್ಕದ್ದು.

*****

<u>ಅನುಬಂಧ-`ಅ’</u>

<u>ಅಂಗವಿಕಲ ಮೀಸಲಾತಿ ಪ್ರಮಾಣ ಪತ್ರ</u>

ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 115, ಸೆನೆನಿ 2005, ದಿನಾಂಕ: 19-11-2005

## CERTIFICATE FOR THE PERSONS WITH DISABILITIES

This is to certify that Sri/Smt/Kum ……….....…………………………………… Son/Wife/Daughter of Shri…………………………………….Age ……… old, male/female, Registration No………………………. is a case of ……………………………………

He/She is physically disabled/visual disabled/speech & hearing disabled and has ………. & ………… percent) permanent (Physical impairment visual impairment speech & hearing impairment) in relation to his/her …………………..

Note:

1. This condition is progressive/non progressive likely to improve/not likely to improve.
2. Re-assessment is not recommended/is recommended after a period of ……….. months/years.

   *Strike out which is not applicable.

Recent attested
Photograph
Showing DOCTOR DOCTOR DOCTOR
the disability (Seal) (Seal) (Seal)
affixed here.

Signature/Thumb impression
of the disabled person.

Countersigned by the
Medical Superintendent CMO/Head of Hospital
(with seal)

Place:
Date:

## ಅನುಬಂಧ-`ಬ'

**(ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 12 ಸೇನೆನಿ 2023, ದಿನಾಂಕ: 23.01.2023ರ ಕಂಡಿಕೆ-3ರಂತೆ).**

**ಅಂಗವಿಕಲ ಸರ್ಕಾರಿ ನೌಕರರು ಇಲಾಖಾ ಪರೀಕ್ಷೆಯನ್ನು ಬರೆಯಲು ದೈಹಿಕ ಅಸಮರ್ಥತೆ ಹೊಂದಿರುವ ಬಗ್ಗೆ ಪ್ರಮಾಣ ಪತ್ರ**

**(ದೃಷ್ಟಿ ಮಾಂದ್ಯತೆ, ಚಲನ ವಲನ ವೈಕಲ್ಯ, (ಎರಡೂ ತೋಳುಗಳು ಪೀಡಿತಗೊಂಡಂತಹ-BA)** ಮತ್ತು ಮೆದುಳಿನ ಪಾರ್ಶ್ವವಾಯು ಈ ಎದ್ದು ಕಾಣುವ ಅಂಗವಿಕಲತೆಯನ್ನು ಹೊಂದಿರುವ ನೌಕರರನ್ನು ಹೊರತು ಪಡಿಸಿ)

ಈ ವೈದ್ಯಕೀಯ ಮಂಡಳಿಯು,________________________________________ (ಅಂಗವೈಕಲ್ಯ ಪ್ರಮಾಣ ಪತ್ರದಲ್ಲಿ ದಾಖಲಿಸಲಾಗಿರುವ ಅಂಗವೈಕಲ್ಯತೆಯ ಸ್ವರೂಪ ಮತ್ತು ಪ್ರತಿಶತ ಪ್ರಮಾಣ) ಅಂಗವೈಕಲ್ಯವನ್ನು ಹೊಂದಿರುವ ಶ್ರೀ/ಶ್ರೀಮತಿ/ಕುಮಾರಿ __________________________(ಅಂಗವಿಕಲ ನೌಕರರ ಹೆಸರು) ______________________(ಹುದ್ದೆ) ____________________ (ಇಲಾಖೆ) ಇವರನ್ನು ಪರೀಕ್ಷಿಸಿದ್ದು, ಇವರ ಅಂಗವೈಕಲ್ಯತೆಯು ಇವರ ಬರವಣಿಗೆ ಸಾಮರ್ಥ್ಯವನ್ನು ಕುಂಠಿತಗೊಳಿಸುವ ದೈಹಿಕ ಅಸಮರ್ಥತೆಯಾಗಿದೆ ಎಂದು ಪ್ರಮಾಣೀಕರಿಸುತ್ತದೆ.

(ಸಹಿ)

ಅಧ್ಯಕ್ಷರು ಮತ್ತು ಸದಸ್ಯರು, ವೈದ್ಯಕೀಯ ಮಂಡಳಿ

ಸ್ಥಳ:

ದಿನಾಂಕ:

ಟಿಪ್ಪಣಿ:

1.ವೈದ್ಯಕೀಯ ಮಂಡಳಿಯ ಸ್ಥಳ ವಿವರಗಳೊಂದಿಗೆ, ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರ ಹೆಸರು ಮತ್ತು ಹುದ್ದೆಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.

2.ಅಂಗವಿಕಲ ಸರ್ಕಾರಿ ನೌಕರರು ಹೊಂದಿರುವ ಅಂಗವೈಕಲ್ಯಕ್ಕೆ ಸಂಬಂಧಿಸಿದ ತಜ್ಞ ವೈದ್ಯರೊಬ್ಬರು ಆಯಾಯಾ ಮಂಡಳಿಯ ಸದಸ್ಯರಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು.

******

## ಅನುಬಂಧ-`ಕ

## 2026ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆ

## ಅಂಧ/ದೃಷ್ಟಿಮಾಂದ್ಯ ಮತ್ತು ಇತರೇ ಎದ್ದು ಕಾಣುವ ಅಂಗವಿಕಲ ಅಭ್ಯರ್ಥಿ ಹಾಗೂ ಲಿಪಿಕಾರರ (Scribe) ವಿವರಗಳ ನಮೂನೆ

| | | |
|---|---|---|
| 1 | ಅಂಧ/ದೃಷ್ಟಿಮಾಂದ್ಯ/ ಇತರೆ ಎದ್ದು ಕಾಣುವ ಅಂಗವೈಕಲ್ಯತೆ ಹೊಂದಿರುವ ಅಭ್ಯರ್ಥಿಯ ಹೆಸರು ಮತ್ತು ನೋಂದಣಿ ಸಂಖ್ಯೆ | |
| 2 | ಅಭ್ಯರ್ಥಿಯು ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆ | |
| 3 | ಪರೀಕ್ಷಾ ಕೇಂದ್ರ ಮತ್ತು ಉಪಕೇಂದ್ರದ ಹೆಸರು ಮತ್ತು ವಿಳಾಸ | |
| 4 | ಲಿಪಿಕಾರರ ಹೆಸರು ಮತ್ತು ಪೂರ್ಣ ವಿಳಾಸ | |
| 5 | ಲಿಪಿಕಾರರ ವಿದ್ಯಾರ್ಹತೆ | |
| 6 | ಅಂಧ/ದೃಷ್ಟಿಮಾಂದ್ಯ/ ಇತರೆ ಎದ್ದು ಕಾಣುವ ಅಂಗವೈಕಲ್ಯತೆ ಹೊಂದಿರುವ ಅಭ್ಯರ್ಥಿಗೆ ಲಿಪಿಕಾರರೊಂದಿಗಿನ ಸಂಬಂಧ | |
| 7 | ಹಾಜರಾಗಿರುವ ವಿಷಯ/ ಪತ್ರಿಕೆ | |
| 8 | ಪರೀಕ್ಷಾ ದಿನಾಂಕ ಮತ್ತು ಸಮಯ | |

**ಸೂಚನೆ:-**

1) ಅರ್ಜಿಯಲ್ಲಿ ತಿಳಿಸಿರುವ ವಿವರಗಳ ಮೇರೆಗೆ ಲಿಪಿಕಾರರಿಗೆ ಪ್ರತ್ಯೇಕವಾಗಿ ಪ್ರವೇಶ ಪತ್ರವನ್ನು ಜಾರಿ ಮಾಡಿದೆ. ಅದನ್ನು ಅಭ್ಯರ್ಥಿಯು ಪರೀಕ್ಷಾ ಸಮಯದಲ್ಲಿ ಹಾಜರುಪಡಿಸಲಿದ್ದಾರೆ. ಲಿಪಿಕಾರರಿಗೆ ನೀಡಿರುವ ಪ್ರವೇಶ ಪತ್ರದಲ್ಲಿರುವ ಲಿಪಿಕಾರರೇ ಹಾಜರಾದರೆ ಅವರಿಂದ ಲಿಪಿಕಾರರ ಪ್ರವೇಶ ಪತ್ರದ ಪ್ರತಿಯನ್ನು ಪಡೆದು, ಅದರ ಮೇಲೆ ಹಾಜರಾಗಿರುವ ವಿಷಯ/ಪತ್ರಿಕೆಯ ಹೆಸರು, ದಿನಾಂಕ ಮತ್ತು ಸಮಯವನ್ನು ಪರೀಕ್ಷಾ ಮೇಲ್ವಿಚಾರಕರು ನಮೂದಿಸಿ, ದೃಢೀಕರಿಸಿ ಆಯೋಗಕ್ಕೆ ಕಳುಹಿಸಿಕೊಡಬೇಕು.

2) ಪ್ರವೇಶ ಪತ್ರದಲ್ಲಿನ ಲಿಪಿಕಾರರ ಬದಲಿಗೆ ಬೇರೆ ವ್ಯಕ್ತಿಯನ್ನು ಲಿಪಿಕಾರರನ್ನಾಗಿ ಕರೆತಂದಲ್ಲಿ ಅವರಿಂದ ಕಡ್ಡಾಯವಾಗಿ ಪ್ರತಿ ವಿಷಯ/ಪತ್ರಿಕೆಗೆ ಪ್ರತ್ಯೇಕವಾಗಿ ಅನುಬಂಧ-ಕ ರಲ್ಲಿ ಲಿಪಿಕಾರರ ಭಾವಚಿತ್ರ ಮತ್ತು ವಿವರಗಳನ್ನು ನೀಡಿ ಅದನ್ನು ಮೇಲ್ವಿಚಾರಕರು ದೃಢೀಕರಿಸಿ ಆಯೋಗಕ್ಕೆ ಕಳುಹಿಸಿಕೊಡತಕ್ಕದ್ದು. ತಪ್ಪಿದಲ್ಲಿ ಅಂತಹ ವಿಷಯ/ಪತ್ರಿಕೆಯ ಫಲಿತಾಂಶವನ್ನು ರದ್ದುಪಡಿಸಲಾಗುತ್ತದೆ.

**ಘೋಷಣಾ ಪತ್ರ**

ಈ ಮೇಲೆ ಒದಗಿಸಲಾದ ಮಾಹಿತಿಗಳು ನಮಗೆ ತಿಳಿದ ಮಟ್ಟಿಗೆ ಸತ್ಯವೆಂದು ಈ ಮೂಲಕ ಪ್ರಮಾಣೀಕರಿಸಿ ಘೋಷಿಸುತ್ತೇವೆ. ಲಿಪಿಕಾರ ಹಾಗೂ ಅಭ್ಯರ್ಥಿಯಾದ ನಾನೂ ಸದರಿ ಪರೀಕ್ಷೆಯ ಸಂಬಂಧವಾಗಿ ನೀಡಿರುವ ಸೂಚನೆಗಳನ್ನು ಓದಿ/ಕೇಳಿ ತಿಳಿದುಕೊಂಡಿರುತ್ತೇವೆ ಮತ್ತು ಈ ಸೂಚನೆಗಳಿಗೆ ಬದ್ಧರಾಗಿರುತ್ತೇವೆ.

(ಪರೀಕ್ಷಾ ಮೇಲ್ವಿಚಾರಕರ ಸಹಿ) (ಅಭ್ಯರ್ಥಿಯ ಸಹಿ) (ಲಿಪಿಕಾರರ ಸಹಿ)

ಹೆಸರು:

ಪದನಾಮ:

ಮೊಹರು:

## ಅನುಬಂಧ-9

**ಕನ್ನಡ ಭಾಷಾ ಪರೀಕ್ಷೆ:-**

1) ಕನ್ನಡ ಭಾಷಾ ವಿಷಯ(ವಿಷಯ ಸಂಕೇತ:47 ಮತ್ತು 72) ದಲ್ಲಿ ಈ ಹಿಂದಿನ ಎರಡು ವರ್ಷಗಳ ಅವಧಿಯಲ್ಲಿ ಲಿಖಿತ ಪರೀಕ್ಷೆಯಲ್ಲಿ ವಿನಾಯಿತಿ ಪಡೆದಿದ್ದಲ್ಲಿ ವಿಷಯ ಸಂಕೇತ:47-ಮತ್ತು 72 ಕನ್ನಡ ಭಾಷಾ ವಿಷಯಕ್ಕೆ ಪುನಃ ಅರ್ಜಿ ಸಲ್ಲಿಸಿ, ವಿನಾಯಿತಿ ಪಡೆದಿರುವ ಬಗ್ಗೆ ವಿವರಗಳನ್ನು ಅರ್ಜಿಯಲ್ಲಿ ನಮೂದಿಸಿ ನಿಗದಿತ ಶುಲ್ಕವನ್ನು ಪಾವತಿಸತಕ್ಕದ್ದು. ವಿಷಯ ಸಂಕೇತ:47 ಮತ್ತು 72 ಕನ್ನಡ ಭಾಷಾ ವಿಷಯದ ಎರಡು ಪತ್ರಿಕೆಗಳಿಗೆ ವಿನಾಯಿತಿ ಪಡೆದಿರುವಂತಹ ಅಭ್ಯರ್ಥಿಗಳು ಯಾವುದೇ ಕಾರಣಕ್ಕೂ ವಿಷಯ ಸಂಕೇತ:73ಅನ್ನು ಆಯ್ಕೆ ಮಾಡಿಕೊಳ್ಳಬಾರದು. ವಿಷಯ ಸಂಕೇತ-73ಅನ್ನು ಕೆಳಗಿನ ಕಂಡಿಕೆ-04(3) ರಲ್ಲಿ ತಿಳಿಸಿರುವ ನೌಕರರು ಮಾತ್ರ ಆಯ್ಕೆ ಮಾಡಿಕೊಳ್ಳಬೇಕು. ಈ ಬಗ್ಗೆ ಅಭ್ಯರ್ಥಿಗಳು ಎಚ್ಚರವಹಿಸಿ ಅರ್ಜಿಯನ್ನು ಭರ್ತಿ ಮಾಡಬೇಕು. ಒಂದು ವೇಳೆ ತಪ್ಪಾಗಿ ಆಯ್ಕೆ ಮಾಡಿಕೊಂಡ ವಿಷಯ ಸಂಕೇತಗಳನ್ನು ಆಯೋಗವು ಯಾವುದೇ ಕಾರಣಕ್ಕೂ ಬದಲಾಯಿಸುವುದಿಲ್ಲ. ಈ ಬಗ್ಗೆ ಸ್ವೀಕರಿಸುವ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

2) ಕನ್ನಡ ಭಾಷಾ ವಿಷಯದ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಮೌಖಿಕ ಪರೀಕ್ಷೆಯನ್ನು ಆಯೋಗದ ಕೇಂದ್ರ ಕಛೇರಿ, ಉದ್ಯೋಗ ಸೌಧ, ಬೆಂಗಳೂರು -560001 ಹಾಗೂ ಬೆಳಗಾವಿ, ಕಲಬುರಗಿ, ಮೈಸೂರು ಮತ್ತು ಶಿವಮೊಗ್ಗ ಜಿಲ್ಲಾ ಕೇಂದ್ರಗಳಲ್ಲಿ ನಡೆಸಲಾಗುವುದು. ಅನಿವಾರ್ಯ ಸಂದರ್ಭಗಳಲ್ಲಿ ಕನ್ನಡ ಭಾಷಾ ಮೌಖಿಕ ಪರೀಕ್ಷೆಯನ್ನು ನಡೆಸಬಹುದಾದ ಕೇಂದ್ರಗಳನ್ನು ಆಯೋಗದ ವಿವೇಚನೆಯನ್ವಯ ನಿರ್ಧರಿಸಲಾಗುವುದು.

3) ಕನ್ನಡ ಭಾಷಾ ವಿಷಯದ ಮೌಖಿಕ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಆಯೋಗದಿಂದ ಪ್ರತ್ಯೇಕವಾಗಿ ಮೌಖಿಕ ಸಂದರ್ಶನದ ಸೂಚನಾ ಪತ್ರಗಳನ್ನು ಜಾರಿ ಮಾಡುವುದಿಲ್ಲ. ಸದರಿ ಸೂಚನಾ ಪತ್ರವನ್ನು ಸೇವಾ ಸಿಂಧು ವೆಬ್‌ಸೈಟ್ ಪೋರ್ಟಲ್ https://sevasindhu.karnataka.gov.in ಮೂಲಕ ಲಾಗಿನ್ ಆಗಿ ಡೌನ್‌ಲೋಡ್ ಮಾಡಿಕೊಂಡು ಅಭ್ಯರ್ಥಿಗಳಿಗೆ ನಿಗದಿಪಡಿಸಿದ ದಿನಾಂಕ ಮತ್ತು ಸಮಯಕ್ಕೆ ಹಾಜರಾಗಬೇಕು. ಇಲ್ಲವಾದಲ್ಲಿ ಸಂದರ್ಶನಕ್ಕೆ ಅವಕಾಶ ನೀಡುವುದಿಲ್ಲ. ಅರ್ಹ ಅಭ್ಯರ್ಥಿಗಳ ನೋಂದಣಿ ಸಂಖ್ಯೆಗಳ ಪಟ್ಟಿಯನ್ನು ಮತ್ತು ಸಂದರ್ಶನದ ದಿನಾಂಕ ಮತ್ತು ಸಂದರ್ಶನ ನಡೆಸಲಾಗುವ ಸ್ಥಳದ ಮಾಹಿತಿಯನ್ನು ಆಯೋಗದ ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗುವುದು.

4) <u>ವಿಷಯ ಸಂಕೇತ: 73- ಲಿಖಿತ ಪರೀಕ್ಷೆಯಿಲ್ಲದೇ ಕನ್ನಡ ಭಾಷಾ ಮೌಖಿಕ ಪರೀಕ್ಷೆ ವಿಷಯವನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವ ಅಭ್ಯರ್ಥಿಗಳು:-</u> ಈ ಕೆಳಗೆ ವಿವರಿಸಿದ ಸಂದರ್ಭಗಳಲ್ಲಿ/ಪ್ರಕರಣಗಳಲ್ಲಿ ಮಾತ್ರ ವಿಷಯ ಸಂಕೇತ:73-ಕನ್ನಡ ಭಾಷಾ ಮೌಖಿಕ ಪರೀಕ್ಷೆ ವಿಷಯವನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು. ಇವರನ್ನು ಹೊರತಾಗಿ ಇತರೆ ಅಭ್ಯರ್ಥಿಗಳು ಈ ವಿಷಯಕ್ಕೆ ಅರ್ಜಿ ಸಲ್ಲಿಸುವಂತಿಲ್ಲ. <u>ಆದರೂ ತಪ್ಪಾಗಿ ಅರ್ಜಿ ಸಲ್ಲಿಸಿದಲ್ಲಿ ಈ ವಿಷಯದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.</u> ಸದರಿ ಕಂಡಿಕೆಯ ಉಪ ಕಂಡಿಕೆ (i), (ii) ಮತ್ತು (iii) ರಲ್ಲಿ ತಿಳಿಸಿರುವ ನೌಕರರನ್ನು ಹೊರತುಪಡಿಸಿ ಇತರೇ ಯಾವುದೇ ಸರ್ಕಾರಿ ನೌಕರರು ಕನ್ನಡ ಭಾಷಾ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾಗದ ಹೊರತು ಕನ್ನಡ ಮೌಖಿಕ ಪರೀಕ್ಷೆಗೆ ಅರ್ಹರಾಗುವುದಿಲ್ಲ. ಆದರೆ

i. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 08 ಎಸ್ಎಸ್ಆರ್ 81, ದಿನಾಂಕ 6ನೇ ಜೂನ್ 1981ರ ಮೇರೆಗೆ ಗೃಹರಕ್ಷಕ ಸಂಸ್ಥೆಯ ಸೈನಿಕರು ಕನ್ನಡ ಭಾಷಾ ಮೌಖಿಕ ಪರೀಕ್ಷೆಯಲ್ಲಿ ಮಾತ್ರ ತೇರ್ಗಡೆಯಾಗತಕ್ಕದ್ದು. ವೇತನ ಮುಂಬಡ್ತಿ ಪಡೆಯುವ ಮತ್ತು ಸೇವಾ ಸ್ಥಿರೀಕರಣದ ಉದ್ದೇಶಗಳಿಗೆ ಕನ್ನಡ ಭಾಷಾ ಲಿಖಿತ ಪರೀಕ್ಷೆಯ ಬದಲಾಗಿ ಗರಿಷ್ಠ 50 ಅಂಕಗಳನ್ನು ನಿಗದಿಪಡಿಸಿರುವ ಕನ್ನಡ ಮೌಖಿಕ ಪರೀಕ್ಷೆಯಲ್ಲಿ ಮಾತ್ರ ಅವರು ತೇರ್ಗಡೆ ಹೊಂದಬೇಕಾಗಿರುತ್ತದೆ.

ii. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 3 ಎಸ್ಎಸ್ಆರ್ 82, ದಿನಾಂಕ 30ನೇ ಆಗಸ್ಟ್ 1982ರ ಮೇರೆಗೆ ಅಂಧ ಮತ್ತು ಕೆಲಸಕ್ಕೆ ಓದುವುದು ಮತ್ತು ಬರೆಯುವುದು ಅವಶ್ಯವಿಲ್ಲದ ಸರ್ಕಾರಿ ನೌಕರರಿಗೆ ಸ್ಥಿರೀಕರಣದ ಮತ್ತು ವಾರ್ಷಿಕ ವೇತನ ಮುಂಬಡ್ತಿಗಳನ್ನು ಪಡೆಯುವ ಉದ್ದೇಶಗಳಿಗಾಗಿ ಕನ್ನಡ ಭಾಷಾ ಲಿಖಿತ ಸೇವಾ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದರಿಂದ ವಿನಾಯಿತಿಸಲಾಗಿದೆ. ಆದರೆ ಅವರು ಕನ್ನಡ ಭಾಷಾ ಮೌಖಿಕ ಪರೀಕ್ಷೆಯಲ್ಲಿ ತೇರ್ಗಡೆಯಾಗತಕ್ಕದ್ದು.

iii. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 26 ಸೆಸೆನಿ 94, ಬೆಂಗಳೂರು, ದಿನಾಂಕ:14-07-1994 ರಲ್ಲಿ ಸೂಚಿಸಿರುವ ಕಂಪೋಜಿಟರ್, ಸೀನಿಯರ್ ಕಂಪೋಜಿಟರ್, ಸೀನಿಯರ್ ಮಷಿನ್ ಮೈಂಡರ್, ಸೀನಿಯರ್ ಬೈಂಡರ್, ಸಹಾಯಕ ಪ್ರೊಸೆಸ್ ಆಪರೇಟರ್, ಆಫ್‌ಸೆಟ್ ಪ್ರಿಂಟರ್, ಆಫ್‌ಸೆಟ್ ಪ್ಲೇಟ್ ಮೇಕರ್ ಹಾಗೂ ವೈರ್‌ಮನ್ ಈ ಪದನಾಮವನ್ನು ಹೊಂದಿರುವ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ಸಿಬ್ಬಂದಿ ವರ್ಗದವರು ಮುಂಬಡ್ತಿ ಪಡೆಯಲು ಕನ್ನಡ ಭಾಷಾ ಪರೀಕ್ಷೆಯ ಲಿಖಿತ ಪರೀಕ್ಷೆ (ಪೇಪರ್ 1 ಮತ್ತು 2) ಯಿಂದ ವಿನಾಯಿತಿ ಹೊಂದಿರುತ್ತಾರೆ. ಆದರೆ ಮೌಖಿಕ ಪರೀಕ್ಷೆಯಲ್ಲಿ ಶೇಕಡ 40ರಷ್ಟು ಅಂಕಗಳನ್ನು ಪಡೆದು ತೇರ್ಗಡೆ ಹೊಂದಬೇಕಾಗಿರುತ್ತದೆ.

## ಅನುಬಂಧ-10

ಇಲಾಖಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಇತ್ತೀಚೆಗೆ ಜಾರಿಯಾಗಿರುವ ಸರ್ಕಾರಿ ಆದೇಶಗಳು:-

### I. Government Notification No.DPAR 2 SSR 2015, Bangalore Dated:27/06/2016.

1. Title and Commencement:-

(1) These rules may be called the Karnataka Civil Services (Service and Kannada Language Examinations) (Amendment) Rules, 2016.

(2) They shall come into force from the date of their publication in the Official Gazette.

2. Amendment to Schedule-I:- In schedule –I to the Karnataka Civil Services( Service and Kannada Language Examination) Rules, 1974, under the heading ``II–SERVICE EXAMINATIONS" under "NOTE.- The syllabi for the different examinations specified above shall be as spiecified below", in Serial No.53 under the Heading "Karnataka Administrative Tribunal Examination" after item 3 and entries relating threrto the following shall inserted, namely:

4) Karnataka Administrative Tribunal (Contempt of Tribunal) Rules, 1987

5) Karnataka Administrative Tribunal (Caveat) Regulations, 1987.

6) Karnataka Administrative Tribunal (Salaries, Allowances and Conditions of Services of Chairman, Vice Chairman and Members) Rules,1986.

### II. Government Notification No.DPAR 1 SSR 2015, Bangalore Dated:23/09/2016

1. Title and Commencement:-

(1) These rules may be called the Karnataka Civil Services (Service and Kannada Language Examinations) (Amendment) Rules, 2015.

(2) They shall come into force from the date of their publication in the Official Gazette.

Amendment to Schedule –I:- In Schedule –I to the Karnataka Civil Services (Service and Kannada Language Examination) Rules,1974, under the heading ``II- SERVICE EXAMINATIONS" under "NOTE- The syllabus for the different examinations specified above shall be as specified below", in Serial No. 31 under the Heading "Forest Departmental Examination" for the entries relating thereunder the following shall be substituted, namely:-

## Paper-I

Marks-100

Time- 3 Hours

a. The Karnataka Forest Act,1963
b. The Karnataka Forest Rules, 1969
c. The Wildlife Protection Act,1972
d. The Wildlife Protection Karnataka Rules, 1973
e. The Forest (Concervation) Act, 1980
f. The Forest (Concervation) Act, 1981
g. The Karnataka Preservation of Trees Act, 1976
h. The Karnataka Preservation of Trees Rules, 1977

## Paper-II

Marks-100

Time- 3 Hours

a. The Karnataka Forest Code,1976
b. The Karnataka Forest Accounts Code,1976
c. The Scheduled Tribes and other Traditional Forest Dwellers Recongnition of Forest Rights Act, 2006

d. The Scheduled Tribes and other Traditional Forest Dwellers Recongnition of Forest Rights Rules, 2007
e. The Karnataka Forest Manual, 1976

III. ಅಧಿಸೂಚನೆ ಸಂಖ್ಯೆ: ಸಿಆಸುಇ 01 ಸೆಸೆನಿ 2019, ದಿನಾಂಕ: 10.06.2020ರಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಪರೀಕ್ಷೆ (Karnataka Administrative Tribunal Examination) ವಿಷಯದ ಪಠ್ಯಕ್ರಮದ ಅಡಿಯಲ್ಲಿ ಬರುವ ಅಂಶ 6 ಮತ್ತು ಸಂಬಂಧಪಟ್ಟ ನಮೂದುಗಳ ನಂತರ ಈ ಕೆಳಕಂಡ ಪಠ್ಯಕ್ರಮವನ್ನು ಸೇರ್ಪಡೆ ಮಾಡಲಾಗಿದೆ.

1. ಕರ್ನಾಟಕ ಆಡಳಿತ ನ್ಯಾಯ ಮಂಡಳಿ (ನ್ಯಾಯಾಲಯ ಶುಲ್ಕ ಮರು ಪಾವತಿ) ವಿನಿಯಮಗಳು, 1990.
   THE KARNATAKA ADMINISTRATIVE TRIBUNAL (REFUND OF COURT FEE) REGULATION, 1990.
2. ಕರ್ನಾಟಕ ಆಡಳಿತ ನ್ಯಾಯ ಮಂಡಳಿ (ಪುನರ್ ಪರಿಶೀಲನಾ ಅರ್ಜಿ) ವಿನಿಯಮಗಳು, 1994.
   THE KARNATAKA ADMINISTRATIVE TRIBUNAL (REVIEW APPLICATION) REGULATION, 1994.

IV ಸಿಬ್ಬಂದಿ ಆಡಳಿತ ಸುಧಾರಣಾ ಇಲಾಖೆಯ ಸಂಖ್ಯೆ: ಸಿಆಸುಇ 4 ಸೆಸನಿ 2016,ದಿನಾಂಕ: 11.12.2017 ರ ಅಧಿಸೂಚನೆಯಲ್ಲಿ "ಅಗ್ನಿಶಾಮಕ ಅಧಿನಿಯಮ 1964, ನಿಯಮಗಳು ಮತ್ತು ಕೈಪಿಡಿ" ವಿಷಯವನ್ನು ನಿಗದಿಪಡಿಸಿದ್ದು, ಪಠ್ಯಕ್ರಮ ಕೆಳಗಿನಂತಿದೆ:-

ಅ) ಕರ್ನಾಟಕ ಅಗ್ನಿಶಾಮಕ ಅಧಿನಿಯಮ, 1964 ಮತ್ತು ಇದರಡಿ ರಚಿಸಲ್ಪಟ್ಟ ನಿಯಮಗಳು.
ಆ) ಕರ್ನಾಟಕ ರಾಜ್ಯ ಅಗ್ನಿಶಾಮಕ ಕೈಪಿಡಿ.

*****

## ಅನುಬಂಧ-11

**ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳುವ ವಿಧಾನ:-**

ಅ) ಪ್ರವೇಶ ಪತ್ರಗಳನ್ನು ಆಯೋಗದಿಂದ ಅಂಚೆ ಮೂಲಕ ಪ್ರತ್ಯೇಕವಾಗಿ ಕಳುಹಿಸಲಾಗುವುದಿಲ್ಲ. ಆದ್ದರಿಂದ ಈ ಕೆಳಗಿನ ವಿಧಾನವನ್ನು ಅನುಸರಿಸಿ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು.

1. ಅಭ್ಯರ್ಥಿಯು ಸೇವಾ ಸಿಂಧು ವೆಬ್‌ಸೈಟ್ https://sevasindhu.karnataka.gov.in/ ಮೂಲಕ ಸೇವಾಸಿಂಧು ಪೋರ್ಟಲ್- ಅನ್ನು ಪ್ರವೇಶಿಸಬೇಕು. Candidates shall access Seva Sindhu portal through Seva Sindhu Website (https://sevasindhu.karnataka.gov.in)
2. ಅಭ್ಯರ್ಥಿಯು ಪೋರ್ಟಲ್ ಮೇಲೆ ತನ್ನ Username & Password ಅಥವಾ ಮೊಬೈಲ್ ಸಂಖ್ಯೆ ಮತ್ತು OTP ಯೊಂದಿಗೆ ಲಾಗಿನ್ ಆಗಬೇಕು.

   Candidate shall login with his/her username & password or Mobile number & OTP on the portal.
3. ಮೆನುಗೆ ಹೋಗಿ "View Status of Application" ಮೇಲೆ ಕ್ಲಿಕ್ ಮಾಡಿ ನಂತರ "Track all applications" ಮೇಲೆ ಕ್ಲಿಕ್ ಮಾಡಿ ಅರ್ಜಿ ಸಂಖ್ಯೆಯನ್ನು 'Application Reference Number' ನಲ್ಲಿ ನಮೂದಿಸಬೇಕು.

   Under Menu, click on "View Status of Application". Click on "Track all applications" & enter the Application No. in App Ref No.
4. ಅಭ್ಯರ್ಥಿಯು "Under Process" ಮೇಲೆ ಕ್ಲಿಕ್ ಮಾಡಿ ನಂತರ ಇಲಾಖಾ ಪರೀಕ್ಷೆಯ ಪ್ರವೇಶ ಪತ್ರವನ್ನು ಡೌನ್ ಲೋಡ್ ಮಾಡಿಕೊಳ್ಳತಕ್ಕದ್ದು.

   Candidate shall click on "Under Process" & then download the Admission Ticket for Departmental Examinations.

ಆ) ಪ್ರವೇಶ ಪತ್ರವನ್ನು ಅಭ್ಯರ್ಥಿಗಳು ಜೋಪಾನವಾಗಿಟ್ಟುಕೊಂಡಿರಬೇಕು ಮತ್ತು ಅವುಗಳನ್ನು ತಮ್ಮ ಸೇವಾ ದಾಖಲೆಗಳಲ್ಲಿ ನಮೂದು ಮಾಡುವುದಕ್ಕಾಗಿ ಆಯೋಗದಿಂದ ನೀಡಲಾದ ತೇರ್ಗಡೆ ಪ್ರಮಾಣ ಪತ್ರದೊಂದಿಗೆ ಸಕ್ಷಮ ಪ್ರಾಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು.

ಇ) <u>ಯಾವುದೇ ಸಂದರ್ಭದಲ್ಲಿ ಪರೀಕ್ಷೆಗಳು ಮುಗಿದ ನಂತರ ಪ್ರವೇಶಪತ್ರದ ನಕಲನ್ನು ಆಯೋಗದಿಂದ</u> **<u>ಜಾರಿ ಮಾಡಲಾಗುವುದಿಲ್ಲ.</u>** ನಕಲು ಪ್ರವೇಶಪತ್ರವನ್ನು ಆಯೋಗದಲ್ಲಿ ಸಂರಕ್ಷಿಸಿಡುವುದಿಲ್ಲವಾದ್ದರಿಂದ ಅಭ್ಯರ್ಥಿಗಳು ಪ್ರವೇಶಪತ್ರವನ್ನು ತಮ್ಮ ಮಾಹಿತಿಗಾಗಿ ಜೋಪಾನವಾಗಿ ಇಟ್ಟುಕೊಳ್ಳತಕ್ಕದ್ದು.

ಈ) ಆನ್‌ಲೈನ್ ಅರ್ಜಿಯಲ್ಲಿ ಭರ್ತಿ ಮಾಡುವ ವಿವರಗಳೇ ಅಂತಿಮವಾಗಿರುತ್ತವೆ. ತದನಂತರ ಅಭ್ಯರ್ಥಿಯ ಹೆಸರಿನಲ್ಲಿನ ತಿದ್ದುಪಡಿ, ಪದನಾಮ, ಕಛೇರಿ ವಿಳಾಸದ ಬದಲಾವಣೆಯನ್ನು ಯಾವುದೇ ಕಾರಣಕ್ಕೂ ಮಾಡಿಕೊಡುವುದಿಲ್ಲ. ಆನ್ ಲೈನ್ ಅರ್ಜಿಯಲ್ಲಿ ಕಛೇರಿ ವಿಳಾಸವನ್ನು ಮಾತ್ರ ನಮೂದಿಸಬೇಕು. ಯಾವುದೇ ಕಾರಣಕ್ಕೂ ಮನೆ ವಿಳಾಸವನ್ನು ನಮೂದಿಸಬಾರದು. ಪ್ರಮಾಣಪತ್ರದಲ್ಲಿ ಕಛೇರಿಯ ವಿವರಗಳನ್ನು ನಮೂದಿಸಬೇಕಿರುವುದರಿಂದ ಮೇಲ್ಕಂಡ ಅಂಶಗಳ ಬದಲಾವಣೆಗಳನ್ನು ಕೋರಿ ಸಲ್ಲಿಸುವ ಮನವಿಗಳನ್ನು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವಿಲ್ಲದೆ ತಿರಸ್ಕರಿಸಲಾಗುವುದು.

ಉ) ಸದರಿ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಅರ್ಹ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ಬಗ್ಗೆ ಆಯೋಗದ ವೆಬ್‌ಸೈಟ್‌ನಲ್ಲಿ **``http://kpsc.kar.nic.in"** ಪ್ರಕಟಿಸಲಾಗುವುದು. ಅಭ್ಯರ್ಥಿಗಳು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕವನ್ನು ನಂತರ ತಿಳಿಸಲಾಗುವುದು. ಸದರಿ ದಿನಾಂಕದಿಂದ ಪ್ರವೇಶಪತ್ರಗಳನ್ನು ಮತ್ತು **``ಅಭ್ಯರ್ಥಿಗಳಿಗೆ ಸೂಚನೆಗಳು''** ಪ್ರತಿಯನ್ನು ಕಡ್ಡಾಯವಾಗಿ **"ಡೌನ್‌ಲೋಡ್"** ಮಾಡಿಕೊಳ್ಳತಕ್ಕದ್ದು.

*****

## ಅನುಬಂಧ-12

**ಉತ್ತೀರ್ಣತಾ ಪ್ರಮಾಣ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ವಿಧಾನ:-**

ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣತೆ ಹೊಂದಿರುವ ಅಭ್ಯರ್ಥಿಗಳು ಉತ್ತೀರ್ಣತಾ ಪ್ರಮಾಣ ಪತ್ರಗಳನ್ನು ಆಯೋಗದ ವೆಬ್‌ಸೈಟ್ **``http://kpsc.kar.nic.in"** ಮುಖಾಂತರ ಡಿಜಿಲಾಕರ್ ಅಕೌಂಟ್‌ನೊಂದಿಗೆ ಆಧಾರ್ ಸಂಖ್ಯೆಯನ್ನು ಜೋಡಿಸಿ ನಂತರ ನಿಮ್ಮ ನೋಂದಣಿ ಸಂಖ್ಯೆ (7 ಅಂಕಿಗಳು) ಯನ್ನು Username ಆಗಿ ಮತ್ತು ಪಾನ್‌ಕಾರ್ಡ್ (PAN CARD) ನಂಬರನ್ನು ಪಾಸ್‌ವರ್ಡ್ ಆಗಿ ಉಪಯೋಗಿಸಿ ಲಾಗಿನ್ ಆದ 3 ರಿಂದ 4 ಗಂಟೆಗಳೊಳಗಾಗಿ ಪ್ರಮಾಣಪತ್ರಗಳನ್ನು ಪಡೆಯಬಹುದಾಗಿದೆ.

**ಉತ್ತೀರ್ಣತಾ ಪ್ರಮಾಣ ಪತ್ರಗಳ ನೈಜತೆ ಪರಿಶೀಲನೆ ವಿಧಾನ:-**

ಉತ್ತೀರ್ಣತಾ ಪ್ರಮಾಣಪತ್ರಗಳನ್ನು ಅಭ್ಯರ್ಥಿಗಳು ಸೇವಾ ಸಿಂಧು ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿರುವುದರಿಂದ ಇಲಾಖೆಗಳು ಇಂತಹ ಪ್ರಮಾಣ ಪತ್ರಗಳ ನೈಜತೆಯ ಪರಿಶೀಲನೆ ಬಗ್ಗೆ ಆಯೋಗಕ್ಕೆ ಕಳುಹಿಸಿಕೊಡುವ ಅವಶ್ಯಕತೆಯಿರುವುದಿಲ್ಲ. ಪ್ರಮಾಣ ಪತ್ರದ ಕೆಳಭಾಗದಲ್ಲಿ ಸೇವಾ ಸಿಂಧುವಿನ ವೆಬ್‌ಸೈಟ್ ವಿಳಾಸ ಮತ್ತು reference ಸಂಖ್ಯೆಯನ್ನು ಮುದ್ರಿಸಲಾಗಿರುತ್ತದೆ. ಸದರಿ ವೆಬ್‌ಸೈಟ್‌ಗೆ ಲಿಂಕ್ ಆಗಬೇಕು. ಇಲ್ಲವೇ ವೆಬ್‌ಸೈಟ್ ಪೋರ್ಟಲ್ ಅನ್ನು ಬೆರಳಚ್ಚು ಮಾಡಬೇಕು. ನಂತರ reference ಸಂಖ್ಯೆಯನ್ನು ನಮೂದಿಸಿ ಪ್ರಮಾಣ ಪತ್ರದ ಪ್ರತಿಯನ್ನು ಪಡೆದುಕೊಂಡು ಅದರಲ್ಲಿನ ವಿವರಗಳನ್ನು ಅಭ್ಯರ್ಥಿ ಸಲ್ಲಿಸಿರುವ ಪ್ರಮಾಣ ಪತ್ರದೊಂದಿಗೆ ಪರಿಶೀಲನೆ ಮಾಡಿ ನೈಜತೆಯನ್ನು ತಿಳಿದುಕೊಳ್ಳಬಹುದಾಗಿರುತ್ತದೆ. ಅಥವಾ ಪ್ರಮಾಣ ಪತ್ರದಲ್ಲಿ ಮುದ್ರಿತವಾಗಿರುವ QR Code ಅನ್ನು ಸ್ಕ್ಯಾನ್ ಮಾಡಿಕೊಂಡು ಉತ್ತೀರ್ಣ ವಿವರಗಳನ್ನು ಪರಿಶೀಲಿಸಿಕೊಳ್ಳಬಹುದಾಗಿದೆ.

**ಅಂಕಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವ ವಿಧಾನ:-**

ಅಭ್ಯರ್ಥಿಗಳು ತಾವು ಹಾಜರಾಗಿರುವ ವಿಷಯಗಳಲ್ಲಿ/ಪತ್ರಿಕೆಗಳಲ್ಲಿ ಗಳಿಸಿರುವ ಅಂಕಗಳ ಮಾಹಿತಿಯನ್ನು ಫಲಿತಾಂಶ ಪ್ರಕಟಗೊಂಡ ನಂತರ ಸೇವಾ ಸಿಂಧು ವೆಬ್‌ಸೈಟ್ ಪೋರ್ಟಲ್ https://sevasindhu.karnataka.gov.in ನಲ್ಲಿ ಪ್ರಕಟಿಸಲಾಗುವುದು. ಅಭ್ಯರ್ಥಿಗಳು ಸದರಿ ವೆಬ್‌ಸೈಟ್ ಮೂಲಕ ತಮ್ಮ ಅವಶ್ಯ ರುಜುವಾತುಗಳನ್ನು (Credentials) ನಮೂದಿಸುವ ಮೂಲಕ ಅಂಕಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. **ಆಯೋಗವು ಯಾವುದೇ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಅಂಕಪಟ್ಟಿಗಳನ್ನು ರವಾನಿಸುವುದಿಲ್ಲ.**

*****

## ಅನುಬಂಧ-13

### ಅಂಕಗಳ ಮರು ಎಣಿಕೆಗೆ ಅರ್ಜಿ ಸಲ್ಲಿಸುವ ವಿಧಾನ :-

2026ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಗಳ ಫಲಿತಾಂಶ ಪ್ರಕಟಣೆಯ ನಂತರ ಅನುತ್ತೀರ್ಣರಾದ ಅಭ್ಯರ್ಥಿಗಳು **ವಿವರಣಾತ್ಮಕ ವಿಷಯಗಳ ಅಂಕಗಳ ಮರು ಎಣಿಕೆಗೆ ಮಾತ್ರ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ ಪ್ರತಿ ವಿಷಯಕ್ಕೆ `100/- ಶುಲ್ಕದೊಂದಿಗೆ ಆನ್ ಲೈನ್ ಮೂಲಕ ಸಲ್ಲಿಸಲು ಕೆಪಿಎಸ್‌ಸಿ ವೆಬ್‌ಸೈಟ್** "http://kpsc.kar.nic.in" ಮುಖಾಂತರ ವಿವರಣಾತ್ಮಕ ಪತ್ರಿಕೆಗಳ ಅಂಕಗಳ ಮರುಎಣಿಕೆಗೆ ಅರ್ಜಿ ಸಲ್ಲಿಸಬಹುದಾಗಿದೆ.

### ವಿಶೇಷ ಸೂಚನೆ:

**ಆಫ್‌ಲೈನ್ ಮೂಲಕ ಅಂಕಗಳ ಮರು ಎಣಿಕೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ. ಆನ್‌ಲೈನ್ ಮೂಲಕ ಅಂಕಗಳ ಮರು ಎಣಿಕೆಗೆ ನಿಗದಿತ ಶುಲ್ಕದೊಂದಿಗೆ ಮನವಿ ಸಲ್ಲಿಸಿದಲ್ಲಿ ಮಾತ್ರ ಅಂತಹ ಮನವಿಗಳನ್ನು ಪರಿಗಣಿಸಲಾಗುವುದು.**

*****